
ಪಂಡಿತ ಸ್ವಾಮಿಗೌಡ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು

ಹೆಚ್.ಆರ್. ಮಂಜಪ್ಪಗೌಡ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೪೮

ಪಂಡಿತ ಸ್ವಾಮಿಗೌಡ

ವ್ಯಕ್ತಿ ಪರಿಚಯ

ಹೆಚ್.ಆರ್. ಮಂಜಪ್ಪ ಗೌಡ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಬಡಾವಣೆ,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

PANDITHA SWAMY GOWDA -
A pen portrait - by H.R. MANJAPPA GOWDA.
Published by : KARNATAKA JANAPADA PARISHATHU,
No.1, Jaladarshini Layout, Near M.S. Ramaiah Hospital Gate,
New B.E.L. Road, Bengaluru - 560 054. Ph : 080-23605033.
Pages : 32 Price : Rs. 10. 2010.

ಪ್ರಥಮ ಮುದ್ರಣ ೨೦೧೦

ಪ್ರತಿಗಳು ೨೦೦೦

ಪುಟಗಳು ೩೨

ಬೆಲೆ ರೂ.೧೦ (ಹತ್ತು ರೂಪಾಯಿ)

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಹೆಚ್.ಆರ್. ಮಂಜಪ್ಪ ಗೌಡ ಅವರು ಪಂಡಿತ ಸ್ವಾಮಿಗೌಡ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಾಡೋಜ ಡಾ. ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೨೨-೦೩-೨೦೦೦

ಪಂಡಿತ ಸ್ವಾಮಿಗೌಡ

ಕನ್ನಡ ಪಂಡಿತರೆಂದೇ ಪ್ರಖ್ಯಾತರಾಗಿದ್ದ ಸ್ವಾಮಿಗೌಡರು ಹಾಸನ ಜಿಲ್ಲೆ, ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಪೊನ್ನಾಥಪುರ ದಾಖ್ಲೆ ದಾಸೇಗೌಡನ ಕೊಪ್ಪಲಿನಲ್ಲಿ ೩-೫-೧೯೨೬ ರಂದು ಜನಿಸಿದರು. ತಂದೆ ರಂಗೇಗೌಡ ಮತ್ತು ತಾಯಿ ರಂಗಮ್ಮ. ಹತ್ತು ಮಕ್ಕಳಲ್ಲಿ ಇವರು ಆರನೆಯವರು. ಇಬ್ಬರು ಅಣ್ಣಂದಿರು, ಮೂವರು ಅಕ್ಕಂದಿರು ಮತ್ತು ನಾಲ್ವರು ತಮ್ಮಂದಿರು. ಇವರ ತಂದೆಗೆ ಇಬ್ಬರು ಪತ್ನಿಯರು. ಮೊದಲನೆಯವರಿಗೆ ಮಕ್ಕಳಿರಲಿಲ್ಲ.

ತಂದೆಯಿಂದ ಬಂದಿದ್ದ ಅರ್ಧ ಮನೆ, ಮೂರು ತುಂಡು ಹೊಲ, ಮೂರು ತುಂಡು ಗದ್ದೆ. ಒಂದು ಜೊತೆ ಎತ್ತುಗಳಿಂದ ದೊಡ್ಡ ಕುಟುಂಬದ ಜೀವನ ಸಾಗಿಸಲಾಗದೆ ಪೊನ್ನಾಥಪುರದ ಜೋಡೀದಾರರ ಜಮೀನನ್ನೇ ಗುತ್ತಿಗೆಗೆ ಸಾಗುವಳಿ ಮಾಡಿ ಬದುಕು ಸಾಗಿಸುತ್ತಿದ್ದರು. ಆದರೂ ಇಡೀ ಕುಟುಂಬದ ನಿರ್ವಹಣೆ ಕಷ್ಟಸಾಧ್ಯವೇ ಆಗಿತ್ತು. ಕಡು ಬಡತನದಲ್ಲೇ ಜೀವನಸಾಗಿತ್ತು. ಆರ್ಥಿಕವಾಗಿ ಕಡುಬಡವರಾದರೂ ಸ್ವಾಮಿಗೌಡರ ತಂದೆ-ತಾಯಿಗಳು ಪರಮ ದೈವಭಕ್ತರಾಗಿದ್ದರು. ಆಡಿದ ಮಾತಿಗೆ ತಪ್ಪಿ ನಡೆದರೆ ಆ ಭಗವಂತ ನಮಗೆ ಒಳ್ಳೇದನ್ನ ಮಾಡೋದಿಲ್ಲ ಎಂಬ ಬಲವಾದ ನಂಬಿಕೆ ಹೊಂದಿದ್ದರು. ನಮ್ಮ ಹಿಂದಿನ ತಲೆಮಾರಿನ ಗ್ರಾಮೀಣಜನರಲ್ಲಿ ಇಂತಹ ಭಾವನೆಗಳೇ ಬಲವಾಗಿದ್ದುದರಿಂದ ದೈವಭಕ್ತಿ, ಪರಸ್ಪರ ನಂಬಿಕೆ, ಸೌಹಾರ್ದ ಜೀವನ ನಡೆಸಲು ಸಹಕಾರಿಯಾಗಿತ್ತು. ದೈವಭಕ್ತರಾಗಿದ್ದ ತಂದೆ-ತಾಯಿಗಳ ಉತ್ತಮ ಭಾವನೆಗಳು, ಉತ್ತಮ ಸಂಸ್ಕಾರ, ನೀತಿ, ನಡವಳಿಕೆಗಳು ಮಕ್ಕಳಲ್ಲಿ ಬೇರೂರಿ ಬೆಳೆಯಲು ಕಾರಣವಾದವು.

ತಂದೆ-ತಾಯಂದಿರ, ಅಕ್ಕಂದಿರ, ಅಣ್ಣಂದಿರ ಪ್ರೀತಿಯ ತಮ್ಮನಾಗಿ, ಅವರೆಲ್ಲರ ಪ್ರೀತಿ, ಒಲವನ್ನು ಗಳಿಸಿ, ಅವರನ್ನೆಲ್ಲಾ ತುಂಬಾ ಗೌರವದಿಂದ ಕಾಣುತ್ತಿದ್ದ ಸ್ವಾಮಿಗೌಡರು, ನಾಲ್ವರು ತಮ್ಮಂದಿರ ಬಗ್ಗೆ ಅಪಾರವಾದ ಪ್ರೀತಿ ಹೊಂದಿ, ಗೌರವ ಸಂಪಾದಿಸಿದರು. ಒಡಹುಟ್ಟಿದವರ ಪ್ರೀತಿ, ಪರಸ್ಪರ ಗೌರವದ ಭಾವನೆ, ತಂದೆ-ತಾಯಿಗಳಿಂದ ಬಳುವಳಿಯಾಗಿ ಬಂದ ದೈವಭಕ್ತಿ ಇವರಲ್ಲಿ ದೈವಿಕ ಭಾವನೆ ಜಾಗೃತಗೊಂಡು, ದೈವಭಕ್ತಿ ಬೆಳೆಯಲು ಕಾರಣವಾಯಿತು.

ಕೇವಲ ಕುಟುಂಬದಲ್ಲಿ ಎಲ್ಲರಿಗೂ ಪ್ರೀತಿಯ 'ಸ್ವಾಮಿ' ಯಾಗಿರದೇ ಊರಿನಲ್ಲಿ ಎಲ್ಲರೂ ಇವರನ್ನು ಅತ್ಯಂತ ಅಕ್ಕರೆಯಿಂದ ಕಾಣುತ್ತಿದ್ದರು. ಬೇರೆ ಕುಟುಂಬದವರು ತಮ್ಮ ಮಕ್ಕಳಿಗೆ ಬೈದು ಬುದ್ಧಿಹೇಳುವಾಗ ಆ 'ಸ್ವಾಮಿ' ನೋಡಿ ಕಲೀರ್ರೋ, ನೋಡಿ ಎಷ್ಟು ಒಳ್ಳೇ ಹುಡುಗ, ಚಿನ್ನ ಚಿನ್ನ ಎಂದು ಹೊಗಳಿ ಕೊಂಡಾಡುತ್ತಿದ್ದರು. ಊರಿನಲ್ಲಿ ಬಂಧುಬಳಗದವರಲ್ಲಿ ಸ್ವಾಮಿಯವರ ನಡೆ-ನುಡಿ, ಬುದ್ಧಿವಂತಿಕೆಯ ಬಗ್ಗೆ ಹೊಗಳಿಕೆಯ ಸುರಿಮಳೆಯೇ ಆಗುತ್ತಿತ್ತು. ಹೊಲ-ಗದ್ದೆ, ದನಕರುಗಳೆಂದರೆ ಇವರಿಗೆ ಚಿಕ್ಕಂದಿನಿಂದಲೇ ಪ್ರೀತಿ. ಯಾವುದೇ ಹಸು ಹಾಲುಕೊಡಲು ತಂಟೆಮಾಡಿದಾಗ ಸ್ವಾಮಿ ಬಂದು, ಹಸು-ಕರುವಿನ ಮೈದಡವಿದರೆ ಹಾಲನ್ನು ಕೊಡುತ್ತಿದ್ದವಂತೆ. ಮನೆಯಲ್ಲಿದ್ದ ಜೊತೆ ಎತ್ತುಗಳ ಮೈದಡವಿ ಹುಲ್ಲು ತಿನ್ನಿಸುವುದೆಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ. ಊರಿನ ಜನರಷ್ಟೇ ಅಲ್ಲ ಪ್ರಾಣಿ, ಪಕ್ಷಿಗಳೆಂದರೆ ಅಪಾರವಾದ ಪ್ರೀತಿಯಿತ್ತು. ಪ್ರಾಣಿ-ಪಕ್ಷಿಗಳಲ್ಲೂ ಭಾವನೆಯಿದೆ, ದೈವತ್ವವಿದೆ ಎಂದು ಭಾವಿಸಿದ್ದ ಇವರು, ಅವುಗಳಿಂದ ನಮ್ಮ ಜೀವನ ಸಾರ್ಥಕವಾಗುತ್ತದೆಂದು ನಂಬಿದ್ದರು. ಎಂದೂ ಯಾರ ಬಗ್ಗೆಯೂ ಕೆಡಕನ್ನು ಯೋಚಿಸಿದವರಲ್ಲ.

ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಜ್ಜಗೌಡನ ಶಾಲೆಯಲ್ಲಿ (೧೯೩೨ ರಿಂದ ೧೯೩೬ರವರೆಗೆ), ಮಾಧ್ಯಮಿಕ ವಿದ್ಯಾಭ್ಯಾಸವನ್ನು ಗೊರೂರಿನಲ್ಲಿ

(೧೯೩೬ ರಿಂದ ೧೯೪೪ರವರೆಗೆ) ಮಾಡಿದರು. ಭಾವ ಪುಟ್ಟಸ್ವಾಮಿ ಗೌಡರು ವಿದ್ಯಾಭ್ಯಾಸಕ್ಕೆ ಮಾರ್ಗದರ್ಶನ ಮಾಡಿದರು. ಪಕ್ಕದ ಗ್ರಾಮ ಉಲಿವಾಲದ ಅಕ್ಕನ ಮನೆಯಲ್ಲಿದ್ದು ಶಾಲೆಗೆ ಬರುತ್ತಿದ್ದರು. ಚಿಕ್ಕವರಿದ್ದಾಗಲೇ ಗುರುಗಳ ಬಗ್ಗೆ ಅಪಾರವಾದ ಗೌರವ, ಶಾಲೆಯ ಬಗ್ಗೆ ಪ್ರೀತಿ ಬೆಳೆಸಿಕೊಂಡರು. ಗುರುಗಳು ಹೇಳುತ್ತಿದ್ದ ಪ್ರೀತಿಮಾತನ್ನು ವೇದವಾಕ್ಯದಂತೆ ಪಾಲಿಸುತ್ತಿದ್ದರು. ಗುರುಭಕ್ತಿ ಇವರಲ್ಲಿ ಚಿಕ್ಕವರಿದ್ದಾಗಲೇ ಜಾಗೃತವಾಯಿತು. ಮಾಧ್ಯಮಿಕ ಶಾಲೆಯಲ್ಲಿದ್ದಾಗ ತೋಟಪ್ಪ ಮಾಸ್ಟರ್, ಪುಟ್ಟಯ್ಯ ಮಾಸ್ಟರ್ ಹಾಗೂ ಮುಖ್ಯೋಪಾಧ್ಯಾಯರಾಗಿದ್ದ ವೆಂಕಟರಾಮಯ್ಯ ಅವರು ಇವರ ಮೇಲೆ ಅಪಾರವಾದ ಪ್ರಭಾವ ಬೀರಿದ್ದರು.

ಮಾಧ್ಯಮಿಕ ಶಾಲೆಯನ್ನು ಗೊರೂರಿನಲ್ಲಿ ಮುಗಿಸಿ ಪ್ರೌಢಶಾಲೆ ವ್ಯಾಸಂಗ ಮಾಡಲು ಹಾಸನಕ್ಕೆ ಹೋಗಬೇಕೆಂದಾಗ ಕುಟುಂಬದ ಕಡುಬಡತನ ಅಡ್ಡಿಯಾದರೂ ಶಿಕ್ಷಕರುಗಳ ಪ್ರೋತ್ಸಾಹ, ಒತ್ತಾಸೆಯಿಂದ ಹಾಸನದ ಸಾಗರ ಪ್ರೌಢಶಾಲೆಯಲ್ಲಿ ದಾಖಲಾದರು. ಊಟ-ವಸತಿಯು ತೊಂದರೆ ಅಡ್ಡಿಯಾಯಿತು. ಎಷ್ಟೇ ಕಷ್ಟಬಂದರೂ ವಿದ್ಯಾಭ್ಯಾಸ ಮುಂದುವರೆಸಲು ನಿರ್ಧರಿಸಿ ರಾಜಘಟ್ಟ, ಮಣಿಚಿನ ಹಳ್ಳಿ ಮತ್ತು ಆಡುವಳ್ಳಿ ಸಂಬಂಧಿಕರ ಮನೆಯಲ್ಲಿ ಊಟ-ವಸತಿಗೆ ವ್ಯವಸ್ಥೆಮಾಡಿಕೊಂಡರು. ಅನೇಕ ದಿನ ಊಟವಿಲ್ಲದೆ ಕಳೆದುದು ಇದೆ. ನಿಷ್ಠುರದ ಮಾತುಗಳ ನಡುವೆ ಮನೆ ಕೆಲಸಗಳನ್ನು ಮಾಡಿಕೊಂಡು ಓದಲೇಬೇಕೆಂಬ ಛಲ ಇವರನ್ನು ಅಧೀರರನ್ನಾಗಿ ಮಾಡಲಿಲ್ಲ. ಅನೇಕ ಕಷ್ಟಗಳನ್ನು ಎದುರಿಸುತ್ತಲೇ ಪ್ರೌಢಶಾಲೆ ಶಿಕ್ಷಣ ಮುಗಿಸಿದರು.

ಶಿಕ್ಷಕ ವೃತ್ತಿ

೧೯೪೭ರ ಆಗಸ್ಟ್ ೧೫ ರಂದು ಸ್ವಾತಂತ್ರ್ಯೋತ್ಸವ ಆಚರಿಸಿದ ಭಾರತ ದೇಶದಲ್ಲೆಲ್ಲ ಸಂಭ್ರಮವೋ ಸಂಭ್ರಮ. ೧೯೪೮ರ ಮಾರ್ಚ್ ತಿಂಗಳಲ್ಲಿ

ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆದರು. ಫಲಿತಾಂಶ ಅನುತ್ತೀರ್ಣ. ತಂದೆಯವರ ಪ್ರೋತ್ಸಾಹ, ಆಡುವಳ್ಳಿ ಬೆಟ್ಟೇಗೌಡರ ಒತ್ತಾಸೆಯಿಂದ, ಸಪ್ಲಿಮೆಂಟರಿ ಪರೀಕ್ಷೆ ಬರೆದು ಉತ್ತೀರ್ಣರಾದರು.

೧೯೪೮ ಡಿಸೆಂಬರ್ ತಿಂಗಳಲ್ಲಿ ಅರಕಲಗೂಡು ತಾಲ್ಲೂಕು ರುದ್ರಪಟ್ಟಣದ ಮಾಧ್ಯಮಿಕ ಶಾಲೆಗೆ ಅಧ್ಯಾಪಕರಾಗಿ ಸರ್ಕಾರಿ ಆದೇಶವಾಯಿತು. ಅದರಂತೆ ರುದ್ರಪಟ್ಟಣದ ಶಾಲೆಯಲ್ಲಿ ರಿಪೋರ್ಟ್ ಮಾಡಿಕೊಳ್ಳಲು ಹೋದಾಗ ಮುಖ್ಯೋಪಾಧ್ಯಾಯರಾಗಿದ್ದ ಪಿ.ಸಿ. ಸುಬ್ಬಣ್ಣ ಅವರು ಎಸ್.ಎಸ್.ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಸರ್ಟಿಫಿಕೇಟ್ ತೋರಿಸುವಂತೆ ಕೇಳಿದಾಗ, ಸರ್ಟಿಫಿಕೇಟ್ ಇನ್ನೂ ಬಾರದಕಾರಣ ವಾಪಸ್ ಹಾಸನಕ್ಕೆ ಬಂದು ಗುರುಗಳಾಗಿದ್ದ ಟಿ. ನಂಜುಂಡ ಶಾಸ್ತ್ರಿಗಳಿಗೆ ತಿಳಿಸಿದರು. ಅವರು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದ ಇವರ ರಿಜಿಸ್ಟರ್ ನಂಬರನ್ನೇ ಗುರುತು ಹಾಕಿ ಆಗಿನ ಡಿಇಒ ಅವರಿಗೆ ತೋರಿಸಿ, ನೌಕರಿಗೆ ಹಾಜರುಪಡಿಸಿಕೊಳ್ಳಬಹುದೆಂದು ಇವರ ನೌಕರಿ ಆದೇಶದ ಮೇಲೆ ಬರೆದುಕೊಟ್ಟರು. ಇದನ್ನು ನೋಡಿದ ನಂತರ ಮುಖ್ಯೋಪಾಧ್ಯಾಯರು ೨೩-೧೨-೧೯೪೮ರಂದು ಶಿಕ್ಷಕ ನೌಕರಿಗೆ ಹಾಜರುಪಡಿಸಿಕೊಂಡರು.

ಶಿಕ್ಷಕ ವೃತ್ತಿಯ ಬಗ್ಗೆ ಅಪಾರವಾದ ಗೌರವ ಹೊಂದಿದ್ದ ಸ್ವಾಮಿಗೌಡರಿಗೆ ಉತ್ತಮ ಶಿಕ್ಷಕನಾಗಬೇಕೆಂಬ ಹಂಬಲ, ವೃತ್ತಿಗೆ ಸೇರಿದಾಗಿನಿಂದ ಪ್ರಬಲವಾಗಿ ಮೂಡಿತು. ರುದ್ರಪಟ್ಟಣದ ಸಂಗೀತ, ಸಾಹಿತ್ಯಕ ವಾತಾವರಣ ಇವರಲ್ಲಿ ಸಾಹಿತ್ಯ ಒಲವು ಬೆಳೆಯಲು ಕಾರಣವಾಯಿತು. ಶಾಲೆಯ ವಾತಾವರಣ ತುಂಬಾ ಉತ್ತಮವಾಗಿತ್ತು. ಇವರಿಗೆ ಮಾರ್ಗದರ್ಶಕರಾಗಿದ್ದ ಮುಖ್ಯೋಪಾಧ್ಯಾಯರು ಅತ್ಯಂತ ಸರಳಜೀವಿಗಳು. ಸಂಗೀತ ವಿದ್ವಾಂಸರಾಗಿದ್ದು, ಅನೇಕ ಮಕ್ಕಳಿಗೆ ಮನೆಯಲ್ಲಿ ಸಂಗೀತಪಾಠ ಹೇಳಿಕೊಡುತ್ತಿದ್ದರು. ಸಹೋಪಾಧ್ಯಾಯರೊಂದಿಗೆ ಸ್ನೇಹಪರರಾಗಿದ್ದರು.

ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಸದಾ ಶ್ರಮಿಸುತ್ತಿದ್ದರು. ಮಕ್ಕಳ ಸರ್ವಾಂಗೀಣ ಪ್ರಗತಿಗಾಗಿ ಅನೇಕ ಪಠ್ಯೇತರ ಚಟುವಟಿಕೆಗಳನ್ನು ನಡೆಸಿ ಪ್ರೋತ್ಸಾಹಿಸುತ್ತಿದ್ದರು. ಈ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಸ್ವಾಮಿಗೌಡರಿಗೆ ಒಳ್ಳೆಯ ಅನುಭವ ಹಾಗೂ ಉತ್ತಮ ಶಿಕ್ಷಕನಾಗಲು ಅಡಿಪಾಯ ದೊರೆಯಿತು.

ಕರ್ನಾಟಕ ರಾಜ್ಯದ ಮಂತ್ರಿಗಳಾಗಿದ್ದ ಎಚ್.ಎನ್. ನಂಜೇಗೌಡರು ಹಾಗೂ ಆರ್.ಟಿ. ತಿಮ್ಮೇಗೌಡರು ಆ ಶಾಲೆಯ ವಿದ್ಯಾರ್ಥಿಗಳಾಗಿದ್ದು ತುಂಬಾ ಚಟುವಟಿಕೆಯಿಂದ ಎಲ್ಲಾ ಚರ್ಚಾಸ್ಪರ್ಧೆಗಳಲ್ಲಿ, ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ, ಓದಿನಲ್ಲೂ ಮೊದಲಿಗರಾಗಿದ್ದರು. ಶಾಲೆಯ ಫಲಿತಾಂಶವು ಸಹ ವರ್ಷದಿಂದ ವರ್ಷಕ್ಕೆ ಪ್ರಗತಿಪಥದಲ್ಲಿತ್ತು. ಎಲ್ಲಾ ಶಿಕ್ಷಕರು ಸಾರ್ವಜನಿಕರ ಮುಕ್ತಕಂಠದ ಪ್ರಶಂಸೆಗೆ ಪಾತ್ರರಾಗಿದ್ದರು.

ರುದ್ರಪಟ್ಟಣದ ಶಾಲೆಯ ಪುಸ್ತಕ ಭಂಡಾರದಲ್ಲಿ ಉತ್ತಮ ಗ್ರಂಥಗಳಿದ್ದವು. ಅವುಗಳನ್ನು ಓದಿ ಸ್ವಾಮಿಗೌಡರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡರು. ಬಿಡುವಿನ ವೇಳೆಯಲ್ಲಿ ಸದಾ ಓದುವ ಹವ್ಯಾಸವನ್ನು ರೂಢಿಸಿಕೊಂಡಿದ್ದು, ಸಾಹಿತ್ಯಾಸಕ್ತಿ ಬೆಳೆಯಲು ಕಾರಣವಾಯಿತು.

ಸಹೋಪಾಧ್ಯಾಯರುಗಳಾಗಿದ್ದ ಕೃಷ್ಣಮೂರ್ತಿ, ಸತ್ಯನಾರಾಯಣ, ಮತ್ತಿಗೋಡು, ಹಿಂದಿ ಪಂಡಿತರು ಮತ್ತಿತರರ ಒಡನಾಟ, ಇವರು ಉತ್ತಮ ಶಿಕ್ಷಕರಾಗಲು ನೆರವಾಯಿತು. ಇವರ ನಡುವೆ ಸಾಹಿತ್ಯದ ಚರ್ಚೆಗಳು ನಡೆಯುತ್ತಿದ್ದವು. ಓದಿದ ಪುಸ್ತಕಗಳ ಬಗ್ಗೆ ಪರಸ್ಪರ ವಿಮರ್ಶೆ ನಡೆಸುತ್ತಿದ್ದರು. ಗಾಂಧೀಜಿ ಅವರ ಆತ್ಮಕಥೆ, ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, ಇತರೆ ಪುಸ್ತಕಗಳು ಇವರ ಮನಃಪರಿವರ್ತನೆಗೆ ಕಾರಣವಾದವು.

ರುದ್ರಪಟ್ಟಣದಲ್ಲಿದ್ದಾಗಲೇ ದಕ್ಷಿಣ ಕಾಶಿ ಎಂದು ಹೆಸರುವಾಸಿಯಾದ ರಾಮನಾಥಪುರದ ದೇವಸ್ಥಾನಗಳ ದರ್ಶನ ಹಾಗೂ ಸ್ಥಳಮಹಿಮೆ ತಿಳಿದಿತ್ತು. ಮೈಸೂರಿನ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ನಿರ್ಮಿಸಲಾದ ಕಟ್ಟೆಪುರದ ಕಟ್ಟೆಯನ್ನು ನೋಡಿ ಪುಳಕಿತರಾದರು. ಅಲ್ಲಿಯ ರುದ್ರರಮಣೀಯ ದೃಶ್ಯ ಇವರನ್ನು ಬಹುವಾಗಿ ಆಕರ್ಷಿಸಿತು. ರುದ್ರಪಟ್ಟಣದ ಪಟೇಲ್ ತಿರುಮಲೇಗೌಡರ ಮಗ ಮಾಸ್ಟರ್ ಗೋವಿಂದೇಗೌಡರೊಂದಿಗೆ ಪ್ರಥಮಬಾರಿಗೆ ಮೈಸೂರು ನಗರವನ್ನು ವೀಕ್ಷಿಸಿದಾಗ ಇವರಿಗೆ ಆದ ಆನಂದ, ಅಪಾರವಾದುದು. ಅರಮನೆ. ಚಾಮುಂಡಿಬೆಟ್ಟ. ಮೃಗಾಲಯ. ಜಗನ್ಮೋಹನ ಅರಮನೆ, ಕೃಷ್ಣರಾಜ ಅಣೆಕಟ್ಟೆಯ ರಮಣೀಯತೆ ಇವರ ಮನಸ್ಸಿನ ಮೇಲೆ ಅಪಾರವಾದ ಪ್ರಭಾವ ಬೀರಿದವು.

೧೯೪೯ರ ಜೂನ್ ತಿಂಗಳಲ್ಲಿ ರುದ್ರಪಟ್ಟಣ ಶಾಲೆಯಿಂದ ವರ್ಗವಾಗಿ ಬೀಳ್ಕೊಟ್ಟಾಗ ಇವರಿಗೆ ಅತೀವ ದುಃಖವಾಯಿತು. ಕಾರಣ ಅಲ್ಲಿಯ ಸಾಂಸ್ಕೃತಿಕ ವಾತಾವರಣ, ಉತ್ತಮ ಸ್ನೇಹಿತರ ಒಡನಾಟ, ಶಾಲೆಯ ಉತ್ತಮ ಪರಿಸರ. ಆದರೂ ಆದೇಶದಂತೆ ಮೊನ್ನಾಥಪುರದ ನೂತನ ಮಾದರಿ ಮಾಧ್ಯಮಿಕ ಶಾಲೆಯ ಇಂಗ್ಲೀಷ್ ಶಿಕ್ಷಕರಾಗಿ ಬಂದು ಕರ್ತವ್ಯಕ್ಕೆ ಹಾಜರಾದರು. ಊರ ಸಮೀಪಕ್ಕೆ ಬಂದುದು ಒಂದೇ ಸಮಾಧಾನದ ಸಂಗತಿಯಾಗಿತ್ತು. ಶ್ರೀಕಂಠಯ್ಯ ಅವರು ಮುಖ್ಯೋಪಾಧ್ಯಾಯರಾಗಿದ್ದರು. ಸಹ ಶಿಕ್ಷಕರ ಉತ್ತಮ ತಂಡವೇ ಅಲ್ಲಿತ್ತು. ಪ್ರತಿ ವರ್ಷ ಶಾಲೆಯ ದಾಖಲಾತಿ ಹೆಚ್ಚುತ್ತಾ ಹೋಯಿತು. ಅಲ್ಲಿದ್ದ ಮೂರುವರ್ಷಗಳೂ ಶಾಲೆಯ ಅಭಿವೃದ್ಧಿಗೆ ವಿಶೇಷ ಆಸಕ್ತಿ ವಹಿಸಿದರು. ಇವರು ಶಾಲೆಯಿಂದ ವರ್ಗವಾದ ನಂತರ ಶಾಲೆಯು ಪ್ರಗತಿ ಕುಂಠಿತವಾಗತೊಡಗಿತು. ಇದನ್ನು ಅಲ್ಲಿಯ ಜನರು ಗುರುತಿಸಿ, ಇವರ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸುತ್ತಿದ್ದರು.

೧೯೫೨ರಲ್ಲಿ ರಟ್ಟಾಯದ ಸರ್ಕಾರಿ ಮಾಧ್ಯಮಿಕ ಶಾಲೆಗೆ ವರ್ಗವಾಯಿತು. ಈ ಶಾಲೆಯಲ್ಲಿದ್ದಾಗಲೇ ಸ್ವಾಗತಗೀತೆಯನ್ನು ರಚಿಸಿ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರಿಂದ ಮೆಚ್ಚುಗೆ ಪಡೆದರು. ಗೊರೂರರು ಹೇಮಾವತಿ ಮುದ್ರಣಾಲಯದಲ್ಲಿ ಗೀತೆಯನ್ನು ಉಚಿತವಾಗಿ ಮುದ್ರಿಸಿಕೊಟ್ಟಿದ್ದರು. ಡಾ। ನಾಗನಗೌಡ ಮತ್ತು ಕಡಿದಾಳ ಮಂಜಪ್ಪ ಅವರ ಪರಿಚಯಕೃತಿಗಳನ್ನು ಬರೆದಿದ್ದರು. ಇದೇ ಅವಧಿಯಲ್ಲಿ ಸಂಸ್ಕೃತ ಕಲಿಯಲು ಪ್ರಾರಂಭಿಸಿದರು. ಕನ್ನಡ ಪಂಡಿತ ಪರೀಕ್ಷೆಗೆ ಪೂರ್ವಭಾವಿ ಪ್ರಯತ್ನ ನಡೆಸಿದರು. ೧೯೫೭ರಲ್ಲಿ ಕನ್ನಡ ಪಂಡಿತ ಪರೀಕ್ಷಾ ವಿದ್ಯಾರ್ಥಿಯಾಗಿ, ಸರ್ಕಾರಿ ಶಿಕ್ಷಣ ಮಹಾ ಪಾಠಶಾಲೆಯಲ್ಲಿ, ನಾಲ್ಕು ವರ್ಷಗಳ ಕಾಲ ವ್ಯಾಸಂಗ ಮಾಡಿ ೧೯೬೧ರಲ್ಲಿ ಪಂಡಿತ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮೈಸೂರಿನ ಕನ್ನಡ ವಾತಾವರಣ, ಹಳೆಗನ್ನಡದ ಬೋಧನೆ ಬಗ್ಗೆ ಪ್ರಭುತ್ವ ಪಡೆದರು. ಸಾಹಿತ್ಯದ ವಾತಾವರಣ ಇವರನ್ನು ಲೇಖನಿ ಹಿಡಿಯುವಂತೆ ಮಾಡಿತು.

ಪಂಡಿತ ಪರೀಕ್ಷೆಗೆ ಅಭ್ಯಾಸ ಮಾಡುವಾಗ ಪಡೆದ ಕನ್ನಡ ಭಾಷೆಯ ಆಳವಾದ ಜ್ಞಾನ, ಇವರಲ್ಲಿದ್ದ ಕನ್ನಡ ಭಾಷಾಪ್ರೇಮ, ಸಾಹಿತ್ಯ ಸೇವೆಯನ್ನು ಆರಂಭಿಸಲು ಪ್ರೇರಣೆಯಾಯಿತು. ಇದೇ ಅವಧಿಯಲ್ಲಿ ಅಂದರೆ ೧೯೬೦ರಲ್ಲಿ 'ಇಪ್ಪತ್ತೆಂಟು ಹಳ್ಳಿಯ ಕತ್ತರಿಘಟ್ಟ ಮತ್ತು ಹರಿಸೇವೆ' ಎಂಬ ಇವರ ಚೊಚ್ಚಲಕೃತಿ ಪ್ರಕಟವಾಯಿತು. ವಿದ್ವಾನ್ ಹೆಚ್.ಕೆ. ಸಿದ್ಧಗಂಗಯ್ಯನವರು, ಸಂಸ್ಕೃತ ಪ್ರಾಧ್ಯಾಪಕರು, ಸರ್ಕಾರಿ ಶಿಕ್ಷಣ ಮಹಾಪಾಠಶಾಲೆ, ಇವರು ಈ ಕಿರುಹೊತ್ತಿಗೆಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಆಶೀರ್ವದಿಸಿದ್ದಾರೆ. ಅಡ್ವೋಕೇಟ್ ಮತ್ತು ಹಾಸನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಜಿ.ಎ.ತಿಮ್ಮಪ್ಪಗೌಡರು ಮುನ್ನುಡಿ ಬರೆದು ಪ್ರೋತ್ಸಾಹದ ನುಡಿಗಳನ್ನು ಆಡಿ ಹಾರೈಸಿದ್ದಾರೆ. ಈ ಎಲ್ಲಾ ಪ್ರಶಂಸೆ, ಪ್ರೋತ್ಸಾಹಗಳು ಇವರ ಮುಂದಿನ ಕೃತಿಗಳ ರಚನೆ ಹಾಗೂ ಪ್ರಕಟಣೆಗೆ ಕಾರಣವಾಗಿವೆ.

೧೯೬೧ರ ಏಪ್ರಿಲ್‌ನಿಂದ ೧೯೬೨ರ ಅಕ್ಟೋಬರ್ ವರೆಗೆ ಜೋಡಿಗುಬ್ಬಿ ಮಾಧ್ಯಮಿಕ ಶಾಲೆಯಲ್ಲಿ ಸೇವೆ ಸಲ್ಲಿಸಿ, ಅದೇ ವರ್ಷ ದುದ್ದ ಮಾಧ್ಯಮಿಕ ಶಾಲೆಗೆ ವರ್ಗವಾದರು. ಅಲ್ಲಿಯ ತಾಲ್ಲೂಕು ಬೋರ್ಡ್ ಪ್ರೌಢಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿದರು. ೧೯೬೨ರಲ್ಲಿ ಪಂಡಿತ ವರ್ಗದ ಬಡ್ತಿ ಪಡೆದು ಚಿತ್ರದುರ್ಗದ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಕನ್ನಡ ಪಂಡಿತರಾಗಿ ಸೇವೆಸಲ್ಲಿಸಿದರು. ಅಲ್ಲಿದ್ದ ಅವಧಿಯಲ್ಲಿ ಸಿರಿಗೆರೆ ಸ್ವಾಮಿಜಿಗಳ ಸಂಪಿಗೆ ಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಅರೆಕಾಲಿಕ ಶಿಕ್ಷಕರಾಗಿ ಎರಡು ವರ್ಷ ಸೇವೆ ಸಲ್ಲಿಸುವ ಅವಕಾಶ ದೊರಕಿತು. ೧೯೬೩ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಕಾವ, ಜಾಣ ಪರೀಕ್ಷೆಗಳನ್ನು ಚಿತ್ರದುರ್ಗ ಕೇಂದ್ರದಲ್ಲಿ ನಡೆಸಿ ಅನೇಕ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಲು ಕಾರಣರಾದರು.

೧೯೬೪ರ ಜೂನ್ ತಿಂಗಳಲ್ಲಿ ಹಾಸನ ಜಿಲ್ಲೆ ಶಾಂತಿಗ್ರಾಮ ಸರ್ಕಾರಿ ಪ್ರೌಢಶಾಲೆಗೆ ವರ್ಗವಾಗಿ ೧೯೭೨ರವರೆಗೆ ಕನ್ನಡ ಅಧ್ಯಾಪಕರಾಗಿ ಕೆಲಸ ನಿರ್ವಹಿಸಿದರು. ಈ ಅವಧಿಯಲ್ಲಿ ಅಂತರ್ ಪ್ರೌಢಶಾಲಾ ಚರ್ಚಾಸ್ಪರ್ಧೆಯನ್ನು ಮುಖ್ಯೋಪಾಧ್ಯಾಯರ ಮಾರ್ಗದರ್ಶನದಲ್ಲಿ ನಡೆಸಿದರು. ಇದರಿಂದ ಅನೇಕ ವಿದ್ಯಾರ್ಥಿಗಳಲ್ಲಿ ಮಾತನಾಡುವ ಕಲೆ, ಧೈರ್ಯ, ಚಿಂತನೆ ಮಾಡುವ ಸಾಮರ್ಥ್ಯ ಬೆಳೆಯಿತು. ಈ ಅವಧಿಯಲ್ಲೆ ಎರಡನೆ ಕೃತಿ 'ಕನ್ನಡ ಸಾಹಿತ್ಯಕ್ಕೆ ಹಾಸನ ಜಿಲ್ಲೆಯ ಕೊಡುಗೆ', ಮೂರನೆ ಕೃತಿ 'ಭಕ್ತ ಚಂದ್ರಹಾಸ' ಮತ್ತು ನಾಲ್ಕನೇ ಕೃತಿ 'ಸೋಬಾನೆ ಪದಗಳು' ಪ್ರಕಟವಾದವು. ಶಿಕ್ಷಕ ವೃತ್ತಿಯ ಜೊತೆಗೆ ಸಾಹಿತ್ಯ ರಚನೆಯನ್ನು ಮುಂದುವರೆಸಿದರು. ಇವರು ಮೊದಲಿನಿಂದಲೂ ಜನಪದ ಸಾಹಿತ್ಯ ಸಂಗ್ರಹದಲ್ಲಿ, ಗ್ರಾಮೀಣ ಬದುಕನ್ನು ಚಿತ್ರಿಸುವುದರಲ್ಲಿ ಸಿದ್ಧಹಸ್ತರೆನಿಸಿದ್ದರು.

೧೯೭೮ರಲ್ಲಿ ಶಾಂತಿಗ್ರಾಮದಿಂದ ಹಾಸನದ ಬಾಲಕರ ಸರ್ಕಾರಿ ಪ್ರೌಢಶಾಲೆಗೆ ವರ್ಗವಾಗಿ ಆರುವರ್ಷಗಳ ಸೇವೆಸಲ್ಲಿಸಿ, ನಂತರ ಪುಟ್ಟಣ್ಣ ಕಣಗಾಲ್ ಪ್ರೌಢಶಾಲೆಯಲ್ಲಿ ಸೇವೆಸಲ್ಲಿಸಿದರು. ಕಣಗಾಲಿನಲ್ಲಿದ್ದಾಗ (ಇದು ಚಲನಚಿತ್ರ ನಿರ್ದೇಶಕ ಪುಟ್ಟಣ ಕಣಗಾಲ ಅವರ ಊರು) ಒಂದು ಸನ್ನಿವೇಶವನ್ನು ನೆನಪಿಸಿಕೊಳ್ಳುತ್ತಾರೆ. ಹಳ್ಳಿಯ ಬಡವಿದ್ಯಾರ್ಥಿಗಳಾಗಿ ಶಾಲಾ ಮುಖ್ಯೋಪಾಧ್ಯಾರಾದ ಎಂ. ರಾಜಶೇಖರ್ ಎಂಬುವರು ಕಣದ ಮೇಲೆ ಭಿಕ್ಷೆ ಎತ್ತಿ ಆ ಮೂಲಕ ಮಧ್ಯಾಹ್ನದ ಉಪಹಾರದ ವ್ಯವಸ್ಥೆ ಮಾಡಿಸುತ್ತಿದ್ದರಂತೆ. ಸಹಕಾರಿ ಸಂಘವನ್ನು ಶಾಲೆಯಲ್ಲಿ ಪ್ರಾರಂಭಿಸುತ್ತಿದ್ದರು. ವಿದ್ಯಾರ್ಥಿಗಳಿಂದ ಸಣ್ಣ ಉಳಿತಾಯಕ್ಕೆ ಪ್ರೋತ್ಸಾಹಿಸಿ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ತೊಡಗಿಸುತ್ತಿದ್ದರಂತೆ. ಸ್ವಾಮಿಗೌಡರು ೧೯೮೧ ಮೇ ತಿಂಗಳಲ್ಲಿ ಶಿಕ್ಷಕಸೇವೆಯಿಂದ ನಿವೃತ್ತರಾದರು.

ಇವರೊಬ್ಬ ಪ್ರಾಮಾಣಿಕ, ಆದರ್ಶ ಶಿಕ್ಷಕರಾಗಿದ್ದರು. ಇವರ ಶಿಷ್ಯರೇ ಹೇಳುವಂತೆ ಇವರು ತರಗತಿಗೆ ಪ್ರವೇಶ ಮಾಡಿದರೆ ಪಾಠಬೋಧನೆ ಕ್ರಮ, ವಿವರಣೆ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಕೆರಳಿಸುವಂತಿತ್ತು. ಇವರ ತರಗತಿಗಾಗಿ ವಿದ್ಯಾರ್ಥಿಗಳು ಕಾಯುತ್ತಿದ್ದರಂತೆ. ಇವರು 'ಭಾಷಾತಜ್ಞ' ತರಬೇತಿಯನ್ನು ಮಾಡಿದ್ದರು. 'ಭಾಷಾಬೋಧನೆ'ಯಲ್ಲಿ ಆಳವಾದ ಜ್ಞಾನವನ್ನು ಪಡೆದಿದ್ದರು. ಭಾಷೆಯನ್ನು ಬೋಧಿಸುವ ಕಲೆ ಇವರಿಗೆ ಕರಗತವಾಗಿತ್ತು. 'ಅಧ್ಯಾಪಕವೃತ್ತಿಯನ್ನೇ ಅತ್ಯಂತ ಗೌರವದಿಂದ ಪ್ರೀತಿಸಿ, ಆರಾಧಿಸಿ ಮೆಚ್ಚುಗೆ ಪಡೆದಿದ್ದರು.

ವಿವಾಹ ಮತ್ತು ಕುಟುಂಬಜೀವನ

ಸ್ವಾಮಿಗೌಡರು ಚಿಕ್ಕಂದಿನಿಂದಲೂ ದೈವಭಕ್ತರು, ಸಾಧು–ಸಂತರು, ಗುರುಗಳನ್ನು ಕಂಡಾಗ ಏನೋ ವಿಶೇಷ ಸೆಳೆತ ಇವರ ಮನಸ್ಸಿನಲ್ಲಿ ಉಂಟಾಗುತ್ತಿತ್ತು. ಇವರೇ ಒಬ್ಬ ಸಂತನಂತೆ ಜೀವನ ನಡೆಸಿದರು.

ಒಳ್ಳೆಯದನ್ನೇ ಆಲೋಚಿಸುತ್ತಾ, ಸದಾ ಪರರ ಹಿತವನ್ನೇ ಬಯಸುತ್ತಿದ್ದರು. ಎಂದೂ ಯಾರಿಗೂ ಕೇಡನ್ನು ಮಾಡುವುದಿರಲಿ, ಯೋಚಿಸಿದವರಲ್ಲ. ತನಗೆ ಬೇರೆಯವರಿಂದ ತೊಂದರೆಯಾದಾಗಲೂ ಅವರ ಹಿತವನ್ನೇ ಬಯಸುತ್ತಿದ್ದರು. ಇವರ ವಿವಾಹಕ್ಕೆ ಸಂಬಂಧಿಸಿದಂತೆ ನಡೆದ ಒಂದು ಘಟನೆಯನ್ನು ಇವರ ಶ್ರೀಮತಿ ದ್ಯಾವಮ್ಮ ಮತ್ತು ಮಗ ಶಂಕರನಾರಾಯಣ ಈಗಲೂ ನೆನಪಿಸಿಕೊಳ್ಳುತ್ತಾರೆ. ಏಕೆಂದರೆ ಅದು ಅವರ ಜೀವನದಲ್ಲಿ ಪವಾಡ ಸದೃಶವಾಗಿತ್ತೆಂದು ಸ್ವಾಮಿಗೌಡರೇ ಮಕ್ಕಳೊಂದಿಗೆ ಹಂಚಿಕೊಳ್ಳುತ್ತಿದ್ದರಂತೆ.

ಒಮ್ಮೆ ಸೀಗೆಗುಡ್ಡದ ಗುರುಗಳು ಉಲಿವಾಲಕ್ಕೆ ಆಗಮಿಸಿದ್ದಾಗ ದೇವಸ್ಥಾನದಲ್ಲಿ ತಂಗಿದ್ದರಂತೆ. ಪ್ರತಿ ಮನೆಯವರೂ ತಮ್ಮಲ್ಲಿದ್ದ ದವಸ, ಬೇಳೆ, ಬೆಲ್ಲ, ಕಿರುಕಾಣಿಕೆಯೊಂದಿಗೆ ತಂದು ಸಲ್ಲಿಸುತ್ತಿದ್ದಾಗ, ಇವರ ಬಂಧುಗಳ ಚಿಕ್ಕ ಹುಡುಗಿಯೊಂದು ಮನೆಯವರು ಕೊಟ್ಟ ಕೊಡುಗೆಯನ್ನು ತಂದುಕೊಟ್ಟು ನಮಸ್ಕರಿಸಿದಾಗ (ಸ್ವಾಮಿಗೌಡ) 'ಸ್ವಾಮಿ' ಈ ಹುಡುಗಿಯೇ ನಿನ್ನ ಜೀವನ ಸಂಗಾತಿಯಾಗುತ್ತಾಳೆಂದು ಗುರುಗಳು ಹೇಳಿದಾಗ ಯಾರೂ ಅದನ್ನು ತೀವ್ರವಾಗಿ ಪರಿಗಣಿಸಿರಲಿಲ್ಲ. ಮುಂದೆ ಇವರ ಮದುವೆ ಪ್ರಸ್ತಾಪ ಬಂದಾಗ ಸುಮಾರು ಐದು ಕಡೆ ಮದುವೆ ನಿಶ್ಚಯವಾಗಿ ಒಂದಲ್ಲ ಒಂದು ಕಾರಣಕ್ಕೆ ತಪ್ಪಿಹೋಗುತ್ತಿತ್ತಂತೆ. ಕೊನೆಗೆ ಗುರುಗಳು ಹೇಳಿದ ಉಲಿವಾಲದ ಬಂಧುಗಳ ಆ ಹುಡುಗಿಯನ್ನೇ ಮದುವೆಯಾದರಂತೆ. ಅವರೇ ಶ್ರೀಮತಿ ದ್ಯಾವಮ್ಮ. ಈ ಘಟನೆ ಅವರ ಜೀವನದುದ್ದಕ್ಕೂ ನೆನಪಿನಲ್ಲಿ ಉಳಿವಂತಹುದಾಗಿತ್ತು. ಗುರುಗಳ ಆಶೀರ್ವಾದರೂಪದಲ್ಲಿ ಮದುವೆಯಾದ ಅವರ ಧರ್ಮಪತ್ನಿಯವರ ಬಗ್ಗೆ ಅವರಿಗೆ ಅಪಾರವಾದ ಪ್ರೀತಿ, ವಿಶ್ವಾಸ. ಎಂದೂ ಅವರ ಮನಸ್ಸಿಗೆ ನೋವಾಗದಂತೆ ನಡೆದುಕೊಂಡಿದ್ದರು. ತಮ್ಮ ಎಲ್ಲಾ ವಿಚಾರಗಳನ್ನು, ಭಾವನೆಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತಿದ್ದರು. ಇವರಿಗೆ ಒಟ್ಟು ಐದು ಮಕ್ಕಳು, ಮೂವರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು.

ಸ್ವಾಮಿಗೌಡರು ತಮ್ಮ ಐವರು ಮಕ್ಕಳಿಗೂ ತಮಗೆ ಬರುತ್ತಿದ್ದ ಸರ್ಕಾರಿ ನೌಕರಿಯ ಸಂಬಳದಲ್ಲೇ ವಿದ್ಯಾಭ್ಯಾಸ ಕೊಡಿಸಿದ್ದಾರೆ. ಎಂದೂ ಆಡಂಬರದ ಜೀವನ ನಡೆಸಿದವರಲ್ಲ. ಏಳು ಜನರ ಕುಟುಂಬ ಮತ್ತು ಮನೆಗೆ ಬಂದುಹೋಗುವ ನೆಂಟರಿಷ್ಟರ ಜೊತೆಗೆ ಯಾವಾಗಲೂ ಒಡಹುಟ್ಟಿದವರ ಮಕ್ಕಳು, ಬಂಧುಗಳ ಮಕ್ಕಳನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ. ಅವರೆಲ್ಲರೂ ಈಗ ಸ್ವಾಮಿಗೌಡರನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಅವರು ಮನೆಯಲ್ಲಿದ್ದಾಗ ಮಕ್ಕಳೊಂದಿಗೆ ಸಾಹಿತ್ಯದ ಚರ್ಚೆ, ಪ್ರಶ್ನೋತ್ತರಗಳು, ವೈಚಾರಿಕ ಚರ್ಚೆಗಳು ನಡೆಯುತ್ತಿದ್ದವಂತೆ. ಪತ್ನಿ, ಮಕ್ಕಳು, ಬಂಧುಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಯಾವದೇ ಭಿನ್ನಾಭಿಪ್ರಾಯಗಳಿಗೆ ಅವಕಾಶ ಕೊಡುತ್ತಿರಲಿಲ್ಲ. ಮಕ್ಕಳೊಂದಿಗೆ ಸ್ನೇಹಿತರಂತೆ, ಸಾಹಿತ್ಯದ ಸಂವಾದ ನಡೆಸುತ್ತಿದ್ದರು. ಅವರ ಸೊಸೆ ಹೇಳುವಂತೆ ಯಾವುದೇ ವಿಷಯ ಪ್ರಸ್ತಾಪಿಸಿದರೂ ಅದಕ್ಕೆ ವಿವರಣೆ ನೀಡಿ, ಹತ್ತಾರು ಉದಾಹರಣೆಯೊಂದಿಗೆ ವಿವರಿಸುತ್ತಿದ್ದರಂತೆ. ಅವರ ಶ್ರೀಮತಿಯವರು ಕೇವಲ ನಾಲ್ಕನೇ ತರಗತಿಯವರೆಗೆ ಓದಿದ್ದರೂ ಸಹ ಬೌದ್ಧಿಕವಾಗಿ ಬಹಳ ಎತ್ತರಕ್ಕೆ ಬೆಳೆದಿದ್ದು ಪತಿಯೊಡನೆ ಅನೇಕ ವಿಷಯಗಳಲ್ಲಿ ಚರ್ಚೆ ನಡೆಸುತ್ತಿದ್ದರು. ಶಾಲೆಯನ್ನು ದೇಗುಲಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಸರ್ಕಾರಿ ಶಾಲೆಗೆ ಬರುವ ಬಡ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿ ಪ್ರೋತ್ಸಾಹಿಸಿ ಚೆನ್ನಾಗಿ ವ್ಯಾಸಂಗಮಾಡುವಂತೆ ಪ್ರೇರೇಪಿಸುತ್ತಿದ್ದರು. ಇವರ ಪ್ರೇರೇಪಣೆಯಿಂದ ಅನೇಕ ಗ್ರಾಮೀಣ ಮಕ್ಕಳು ವಿದ್ಯಾಭ್ಯಾಸದಲ್ಲಿ ಆಸಕ್ತಿ ಬೆಳೆಸಿಕೊಂಡು ಮುಂದೆ ಬಂದಿದ್ದಾರೆ. ವಿದ್ಯೆಯಿಂದ ವಿನಯವಂತರಾಗಬೇಕೆಂದು, ಉತ್ತಮ ನಾಗರೀಕರಾಗಬೇಕೆಂದು, ಒಳ್ಳೆಯ ಸಂಸ್ಕಾರ ಪಡೆದು ನೀತಿವಂತರಾಗಿ ಬಾಳಬೇಕೆಂದು ಸಾಹಿತ್ಯಬೋಧನೆ ಮಾಡುವಾಗ ತಿಳಿಸಿಹೇಳುತ್ತಿದ್ದರು. ಶಾಲೆಯ ಸರ್ವತೋಮುಖ

ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ಯಾರೊಂದಿಗೂ ಎಂದೂ ಜಗಳವಾಡಿದವರಲ್ಲ, ಅತ್ಯಂತ ಸೌಹಾರ್ದತೆಯಿಂದ ಇರುತ್ತಿದ್ದರು.

ಸಾಹಿತ್ಯ ಸೇವೆ

ವಿದ್ಯಾರ್ಥಿಯಾಗಿದ್ದಾಗಲೇ ಸಾಹಿತ್ಯ ಕೃತಿಗಳ ವ್ಯಾಸಂಗಕ್ಕೆ ಗಮನ ಕೊಡುತ್ತಿದ್ದರು. ಶಾಲೆಯ ಗ್ರಂಥಾಲಯದ ಪುಸ್ತಕಗಳ ಧೂಳುಜಾಡಿಸಿ, ಅವುಗಳನ್ನು ಓರಣವಾಗಿ ಜೋಡಿಸಿಟ್ಟು, ಅವುಗಳ ಅಭ್ಯಾಸಮಾಡಿ ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಹೀಗೆ ಇವರ ಸಾಹಿತ್ಯಾಸಕ್ತಿ ಬೆಳೆಯತೊಡಗಿತು. ಶಾಲೆಯ ಶಿಕ್ಷಕರೂ ಸಹ ಇವರ ಆಸಕ್ತಿಗೆ ನೀರೆರೆದು ಪೋಷಿಸಿ ಬೆಳವಣಿಗೆಗೆ ಕಾರಣರಾದರು. ಇವರು ಬರೆದು ತೋರಿಸುತ್ತಿದ್ದ ಕವನಗಳನ್ನು ಓದಿ, ಬರವಣಿಗೆಗೆ ಪ್ರೋತ್ಸಾಹನೀಡುತ್ತಿದ್ದರು. ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸಿ, ಆರಾಧಿಸುತ್ತಿದ್ದರು. ಸಾಹಿತಿಗಳೊಂದಿಗಿನ ಒಡನಾಟ, ಚರ್ಚೆ, ಸಂವಾದ ಇವರ ಕವಿ ಮನಸ್ಸನ್ನು ಜಾಗೃತಗೊಳಿಸಿತು. ಗ್ರಾಮೀಣ ಪ್ರದೇಶದ, ಶ್ರಮಿಕರ ಹಾಡುಗಳನ್ನು, ಜನಪದ ಗೀತೆಗಳನ್ನು ಸಂಗ್ರಹಿಸುವ ಹವ್ಯಾಸ ಬೆಳೆಸಿಕೊಂಡು, ಅವುಗಳಿಗೆ ಅಕ್ಷರರೂಪ ಕೊಡಲು ತೀರ್ಮಾನಿಸಿದರು. ಜನಪದ ಸಾಹಿತ್ಯ ಇವರಿಗೆ ಅಚ್ಚುಮೆಚ್ಚು. ಸೋಬಾನೆ ಪದಗಳು, ಜನಪದ ಕಥನಗೀತೆಗಳು, ಮಂಗಳಾರತಿ ಪದಗಳು, ಕೋಲಾಟದ ಹಾಡುಗಳು, ಲಾವಣಿ, ರಾಗಿಬೀಸುವಾಗ ಹಾಡುವ ಪದಗಳು ಹೀಗೆ ಅನೇಕ ಪ್ರಕಾರದ ಜನಪದ ಹಾಡುಗಳನ್ನು ಸಂಗ್ರಹಿಸಿದರು. ತಮ್ಮ ಬಿಡುವಿನ ವೇಳೆಯನ್ನು ಇದಕ್ಕಾಗಿ ಮೀಸಲಿಟ್ಟು, ಗ್ರಾಮೀಣ ಪ್ರದೇಶದಲ್ಲಿ ಸಾರಿಗೆ ಸೌಲಭ್ಯವಿಲ್ಲದ ಅಂದಿನ ದಿನಗಳಲ್ಲಿ ಊರಿಂದೂರಿಗೆ ನಡೆದುಕೊಂಡೇ ಓಡಾಡುತ್ತಿದ್ದರು. ಹಳೆಗನ್ನಡದಲ್ಲಿ ಪ್ರಭುತ್ವವನ್ನು ಸಾಧಿಸಿದ್ದ ಇವರು ಜೈಮಿನಿ ಭಾರತವನ್ನು ಸುಶ್ರಾವ್ಯವಾಗಿ ವಾಚಿಸಿ, ಪದಸಹಿತ ಅರ್ಥವಿವರಣೆ ನೀಡುತ್ತಿದ್ದರು. ಪಂಡಿತ ಸ್ವಾಮಿಗೌಡರು ಯಾವುದೇ ಹಳ್ಳಿಯ ಹಬ್ಬ ಸಮಾರಂಭಗಳಿಗೆ ಹೋದರೆ ಜೈಮಿನಿ ಭಾರತವನ್ನು ಓದಿಸಿ

ಕೇಳದೆ ಇರುತ್ತಿರಲಿಲ್ಲ. ತಮ್ಮ ಸೊಗಸಾದ ಕಂಠಸಿರಿಯಿಂದ ಹಾಡಿ, ಉಪಕಥೆಗಳನ್ನು ಹೇಳಿ ಜನರ ಭಾವನೆಗಳನ್ನು ಸನ್ಮಾರ್ಗದ ಕಡೆ ತರುತ್ತಿದ್ದರು. ಜನರು ಇವರನ್ನು ತುಂಬಾ ಗೌರವದಿಂದ, ಪೂಜ್ಯಭಾವನೆಯಿಂದ ಕಾಣುತ್ತಿದ್ದರು. ಸರಳ, ಸಜ್ಜನಿಕೆಗೆ ಮತ್ತೊಂದು ಹೆಸರು ಪಂಡಿತ ಸ್ವಾಮಿಗೌಡರು ಎನ್ನುವಷ್ಟು ಪ್ರಭಾವ ಬೆಳೆಸಿಕೊಂಡಿದ್ದರು. ಗ್ರಂಥದ ಸಹಾಯವಿಲ್ಲದೆ, ನೂರಾರು ಶ್ಲೋಕಗಳನ್ನು ಹೇಳಿ, ಅರ್ಥೈಸುತ್ತಿದ್ದರು. ಇದರಿಂದ ಇವರ ಜನಪ್ರಿಯತೆ ಇನ್ನೂ ಹೆಚ್ಚಾಗಲು ಕಾರಣವಾಯಿತು. ಜನರಿಗೆ ಮನರಂಜನೆಯ ಜೊತೆಗೆ ಆಧ್ಯಾತ್ಮಿಕ ಒಲವು ಮೂಡಲು ಕಾರಣರಾದರು. ತಮಗೆ ಬರುತ್ತಿದ್ದ ಅಲ್ಪವೇತನದಲ್ಲೇ ಸ್ವಲ್ಪ ಭಾಗವನ್ನು ಸಾಹಿತ್ಯ ಸೇವೆಗೆ ಮುಡುಪಾಗಿಟ್ಟಿದ್ದರು. ಇವರು ಶಾಲೆಯಲ್ಲಿ ಮಾತ್ರ ಕನ್ನಡ ಪಂಡಿತರಾಗಿರದೆ, ಸಮಾಜದ ಅನಕ್ಷರಸ್ಥ ಜನರಿಗೂ ಪಂಡಿತರಾಗಿದ್ದರು. ಹಳ್ಳಿಗರ ಮೌಢ್ಯ, ಅಂಧಾನುಕರಣೆ, ಅನಕ್ಷರತೆ, ಅಜ್ಞಾನವನ್ನು ದೂರಮಾಡಿ ದೈವಭಕ್ತಿ, ಭಾವೈಕ್ಯ ಸಹಬಾಳ್ವೆ, ಪ್ರೀತಿ ವಿಶ್ವಾಸ ಬೆಳೆಯಲು ಸಹಕಾರಿಯಾಗಿದ್ದರು.

ಇವರ ಮೊದಲ ಕೃತಿಯಲ್ಲಿ ಗಂಜಿಗೆರೆ, ಪೊನ್ನಾಥಪುರ ಹೋಬಳಿಯ ಇಪ್ಪತ್ತೆಂಟು ಹಳ್ಳಿಗಳ ಗ್ರಾಮಸ್ಥರು ಒಟ್ಟಾಗಿ ಕತ್ತರಿಘಟ್ಟ ಜಾತ್ರೆ ಮತ್ತು ಶ್ರೀ ವೆಂಕಟರಮಣಸ್ವಾಮಿಯ ಹರಿಸೇವೆಯ ಆಚರಣೆ ಬಗ್ಗೆ ವಿವರಣೆ ನೀಡಿದ್ದಾರೆ. ಪ್ರತಿ ಹಳ್ಳಿಯಿಂದ ಒಬ್ಬ ಮುಖಂಡರನ್ನು ಆಯ್ಕೆಮಾಡಿ ಒಂದು ಸಮಿತಿ ರಚಿಸಿ, ಚಂದಾ ಸಂಗ್ರಹಿಸಿ, ಅದರ ಸಂಪೂರ್ಣ ನಿರ್ವಹಣೆಯನ್ನು ತುಂಬಾ ಅಚ್ಚುಕಟ್ಟಾಗಿ, ಜನ ಮೆಚ್ಚುವಂತೆ ಭಯ-ಭಕ್ತಿಯಿಂದ ದೇವರ ಕಾರ್ಯವನ್ನು ನೆರವೇರಿಸುತ್ತಿದ್ದ ಬಗ್ಗೆ ವಿವರಿಸಿದ್ದಾರೆ.

'ಕನ್ನಡ ಸಾಹಿತ್ಯಶ್ರೀಗೆ ಹಾಸನ ಜಿಲ್ಲೆಯ ಕೊಡುಗೆ' ಇವರ ಎರಡನೆಯ ಕೃತಿ ೧೯೬೯ರಲ್ಲಿ ಪ್ರಕಟವಾಯಿತು. ಇದು ಅತ್ಯಂತ ಶ್ರೇಷ್ಠ ಕೃತಿ ಎನಿಸಿದೆ. ಇದರಲ್ಲಿ ಕನ್ನಡದ ಪ್ರಪ್ರಥಮ ಶಾಸನ 'ಹಲ್ಮಿಡಿ ಶಾಸನ' ದಿಂದ ಹಿಡಿದು

ಆಧುನಿಕ ಸಾಹಿತ್ಯದವರೆಗೆ ಹಾಸನ ಜಿಲ್ಲೆಯ ಕೊಡುಗೆಯನ್ನು ಅಧ್ಯಯನಮಾಡಿ ಸಂಗ್ರಹಿಸಿದ್ದಾರೆ. ಇದು ಜಿಲ್ಲೆಯ ಸಾಹಿತ್ಯ ಹಾಗೂ ಸಾಹಿತಿಗಳ ಕುರಿತ ಉಪಯುಕ್ತ ಮಾಹಿತಿಯಾಗಿದೆ. ಇಂತಹ ಪರಿಚಯಾತ್ಮಕ ಕೃತಿಗಳಲ್ಲಿ ಇದೇ ಮೊದಲನೆಯದು. ಅತ್ಯಂತ ಶ್ರಮದಾಯಕ ಕೆಲಸವನ್ನು ಪ್ರೀತಿಯಿಂದ, ಪೂರ್ಣಮನಸ್ಸಿನಿಂದ ಮಾಡಿದ್ದಾರೆ. ತಮ್ಮ ಶಿಕ್ಷಕವೃತ್ತಿಗೆ ಚ್ಯುತಿಬಾರದಂತೆ ಪ್ರಾಮಾಣಿಕಸೇವೆ ಸಲ್ಲಿಸುತ್ತಾ ಶ್ರದ್ಧೆಯಿಂದ ಈ ಕೃತಿ ರಚಿಸಿರುವ ಇವರ ಕಾರ್ಯ ಅತ್ಯಂತ ಶ್ಲಾಘನೀಯ.

ಇವರ ಕಾರ್ಯದ ಬಗ್ಗೆ ಬೆಂಗಳೂರಿನಿಂದ ೧೯೭೧ರಲ್ಲಿ ಪ್ರಕಟಿಸಿದ 'ಗೆಜೆಟಿಯರ್ ಆಫ್ ಇಂಡಿಯಾ' ಮೈಸೂರು ಸ್ಟೇಟ್, ಹಾಸನ ಡಿಸ್ಟ್ರಿಕ್ಟ್ ಪುಟ ಸಂಖ್ಯೆ ೫೪೭ರಲ್ಲಿ ಹೀಗೆ ದಾಖಲಿಸಲಾಗಿದೆ :

Pandit Swamy Gowda, a teacher hailing from Dasegowdana Koppalu in Alur-Taluk who is a traditional writer has collected Folk songs and has written "Hassan Jilleya Kannada Sahitya Koduge", which gives sketches of literary persons hailing from the Hassan District and their works from the early times to the present day.

He is the author of "Ippathentu Halliya Kattarighatta Mathu hariseve" and other books.

ಇವರ ಶ್ಲಾಘನೀಯ ಕಾರ್ಯ ಗೆಜೆಟಿಯರ್‌ನಲ್ಲಿ ದಾಖಲಾದುದು ಹೆಮ್ಮೆಯ ಸಂಗತಿಯಾಗಿದೆ. ಅದೇ ವರ್ಷ (೧೯೬೯) ಗಾಂಧೀಜಿ ಅವರ 'ಜನ್ಮ ಶತಮಾನೋತ್ಸವ ಆಚರಣೆ' ದೇಶದಾದ್ಯಂತ ನಡೆಯುತ್ತಿತ್ತು. ಚಿತ್ರದುರ್ಗ ಜಿಲ್ಲಾ ಉಪನಿರ್ದೇಶಕರಾಗಿದ್ದ ಕೆ.ಏ. ಶೈಣೈರವರು ಮುನ್ನುಡಿ ಬರೆದು

ಶುಭ ಹಾರೈಸಿದ್ದಾರೆ. ಇವರ ನೆಚ್ಚಿನ ಗುರುಗಳಲ್ಲೊಬ್ಬರಾಗಿದ್ದ ಟಿ. ನಂಜುಂಡಶಾಸ್ತ್ರಿಗಳಿಗೆ ಕೃತಿಯನ್ನು ಅರ್ಪಣೆ ಮಾಡಿದ್ದಾರೆ.

ಶ್ರೀಯುತರ ಮೂರನೆ ಕೃತಿ 'ಭಕ್ತಚಂದ್ರಹಾಸ' ೧೯೭೧ರಲ್ಲಿ ಪ್ರಕಟವಾಯಿತು. ಇದಕ್ಕೆ ಮುನ್ನುಡಿಯನ್ನು ಸುಪ್ರಸಿದ್ಧ ಸಾಹಿತಿಗಳಾದ ತ.ಸು. ಶಾಮರಾಯರು ಬರೆದು ಹಾರೈಸಿದ್ದಾರೆ. ಕೃತಿಯನ್ನು ಗುಬ್ಬಿಯ ಶ್ರೀ ಚಿದಂಬರ ಸ್ವಾಮಿಗಳಿಗೆ ಅರ್ಪಣೆ ಮಾಡಿದ್ದಾರೆ. ಮೂಲದಲ್ಲಿ ಪದ್ಯರೂಪದಲ್ಲಿರುವ ಕಥೆಯನ್ನು ಇವರು ಸುಂದರ, ಸರಳ ಗದ್ಯರೂಪದಲ್ಲಿ ಬರೆದಿದ್ದಾರೆ. ಲಕ್ಷ್ಮೀಶನ ಜೈಮಿನಿ ಭಾರತದಿಂದ ಆಯ್ದುಕೊಂಡಿರುವ ಈ ಕಥೆ ಜನರಲ್ಲಿ ಭಕ್ತಿ-ಭಾವ ಮೂಡಲು ಸಹಕಾರಿಯಾಗಿದೆ.

ಇವರ ನಾಲ್ಕನೇ ಕೃತಿ 'ಸೋಬಾನೆ ಪದಗಳು' ೧೯೭೩ರಲ್ಲಿ ಪ್ರಕಟವಾಯಿತು. ಗ್ರಾಮೀಣ ಸೊಗಡಿನ ಜನಪದ ಕಥೆಗಳು, ಜನಪದ ಹಾಡುಗಳ ಸಂಗ್ರಹದಲ್ಲಿ ಪರಿಣಿತರಾಗಿದ್ದ ಸ್ವಾಮಿಗೌಡರು ಮೂಲತಃ ಜಾನಪದ ಸಾಹಿತಿ. ಇವರು ಜನಪದ ಸಾಹಿತ್ಯಕ್ಕೆ ತಮ್ಮ ಈ ಕೃತಿಯನ್ನು ಕೊಡುಗೆಯಾಗಿ ನೀಡಿದ್ದಾರೆ. ಗ್ರಾಮೀಣ ಕೃಷಿಕರು ತಮ್ಮ ಕೆಲಸದಲ್ಲಿ ಬಿಡುವಾದಾಗ ಹೇಳಿದ ಪದಗಳನ್ನು ತಾಳ್ಮೆಯಿಂದ ಬರೆದುಕೊಂಡು ಅಕ್ಷರ ರೂಪ ನೀಡಿ ಪ್ರಕಟಿಸಲು ಹಲವಾರು ವರ್ಷಗಳೇ ಬೇಕಾದವು. ಅವರ ಮಾತಿನಲ್ಲೇ ಹೇಳುವುದಾದರೆ "ಇವನ್ನಾಗಲೇ ಬರೆದಿಟ್ಟು ಇಪ್ಪತ್ತುವರ್ಷವಾಗಿತ್ತು. ಆದರೂ ಅವು ಬೆಳಕು ಕಾಣುವ ಯೋಗ ಈಗ ಒದಗಿಬಂದಿದೆ". ಈ ಸಂಗ್ರಹ "ಹುಟ್ಟಿ ಹುಟ್ಟಿದವರಿಗೆ ಹಿರಿಯದು, ಬೆಳೆ ಬೆಳೆದವರಿಗೆ ಕಿರಿಯದು ಎನ್ನುವಂತಾಗಿದೆ. ಇದಕ್ಕೆ ನನ್ನ ಆರ್ಥಿಕ ಮುಗ್ಗಟ್ಟೇ ಕಾರಣವಾಯಿತು" ಎಂದಿದ್ದಾರೆ.

ಈ ಕೃತಿಗೆ ಹಾಸನದ ಹಿರಿಯ ಸಾಹಿತಿಗಳಾದ ದಿವಂಗತ ಡಿ.ಆರ್.ಚನ್ನೇಗೌಡರು ಮುನ್ನುಡಿ ಬರೆದಿದ್ದಾರೆ. ಸನ್ಮಾನ್ಯ ದೇ.ಜ.ಗೌ. ಅವರಿಗೆ ಗೌರವ ಪೂರ್ವಕವಾಗಿ ಅರ್ಪಣೆ ಮಾಡಿದ್ದಾರೆ.

ಡಿ.ಆರ್. ಚನ್ನೇಗೌಡರು ತಮ್ಮ ಮುನ್ನುಡಿಯಲ್ಲಿ ಹೇಳುವಂತೆ, "ಈ ಸೋಬಾನೆ ಪದಗಳ ಸಂಗ್ರಹದಲ್ಲಿ ಅನೇಕ ಗ್ರಾಮ್ಯಶಬ್ದಗಳ ವಿಫುಲ ಸಂಪತ್ತಿದೆ. ಮಾನವ ಜೀವಿತದ ನಾನಾ ಘಟ್ಟಗಳ ಅಂದರೆ ಹೆಣ್ಣು-ಗಂಡುಗಳ ಬಾಳಿನ ಜೀವನ ವೈಖರಿಯ ಸುಖ-ದುಃಖಗಳ, ಹಾಸ್ಯ, ಪ್ರೇಮಗಳ ಸವಿಯ ಹೊನಲಿದೆ. ಅಪಾರ ಪರಿಶ್ರಮದಿಂದ ಅನೇಕ ಮಿತ್ರರ, ನೆಂಟರ, ಅಕ್ಕ-ತಂಗಿಯರ, ಅತ್ತಿಗೆ ನಾದಿನಿಯರ ಸಹಕಾರದಿಂದ ಸ್ವಾಮಿಗೌಡರು ಭಕ್ತಿಯಿಂದ ಸಂಗ್ರಹಿಸಿದ ಈ ಪದಗಳ ಅಮೃತವು ಸರ್ವರೂ ಉಂಡು ಆನಂದವೀಯುವಂತಾಗಲಿ" ಎಂದು ಶುಭಹಾರೈಸಿದ್ದಾರೆ.

ಕೃತಿ ರಚನೆಕಾರರೇ ಹೇಳುವಂತೆ "ನನ್ನ ಬಾಲ್ಯದಿಂದಲೂ ಈ ಹಾಡುಗಳನ್ನು ಹಾಡುವಾಗ ಕೇಳಿ ಕೇಳಿ ಸಂತೋಷಿಸುತ್ತಿದ್ದ ಮನಸ್ಸು, ಇವನ್ನು ಸಂಗ್ರಹಿಸುವುದರಲ್ಲಿ ಆಸಕ್ತಿ ವಹಿಸಿತು".

"ಸಾಹಿತ್ಯವನ್ನು ಅಂದರೆ ಒಳ್ಳೆಯ ಬರಹವನ್ನು ಓದುವುದು, ಮನನ ಮಾಡುವುದು ಮನಸ್ಸಿಗೆ ಹಿತಕಾರಿ, ಜೀವನಕ್ಕೆ ಆನಂದಕಾರಿ. ಈ ದಿಸೆಯಿಂದ ಆದಿಕವಿ ವಾಲ್ಮೀಕಿ ಪ್ರೇರಿತ ರಾಮಾಯಣವೂ ಮಹರ್ಷಿ ವ್ಯಾಸರಿಂದ ರಚಿಸಲ್ಪಟ್ಟ ಮಹಾಭಾರತವೂ ಶುಕಮಹರ್ಷಿಗಳಿಂದ ಅನುಗ್ರಹಿಸಲ್ಪಟ್ಟ ಭಾಗವತವೂ ಜನರಿಗೆ ಏನು ಮಂಗಳವನ್ನು ಉಂಟುಮಾಡುತ್ತವೆಯೋ ಅಷ್ಟೇ ಮಂಗಳವನ್ನು ಈ ಸೋಬಾನೆ ಪದಗಳಿಂದಲೂ ಸಮಾಜಕ್ಕೆ ದೊರೆಯುತ್ತದೆಂದು ನನ್ನ ನಂಬಿಕೆ" ಎಂದಿದ್ದಾರೆ ಮುನ್ನುಡಿಯಲ್ಲಿ.

"ಉತ್ಸಾಹಿ ಕನ್ನಡ ಪಂಡಿತ ಶ್ರೀ ಸ್ವಾಮಿಗೌಡರಿಂದ ಸಂಗ್ರಹವಾದ ಈ ಕೃತಿ ನಮ್ಮ ಜಿಲ್ಲೆಯ ಸುತ್ತ ಮದುವೆಯ ಸಮಾರಂಭಕ್ಕೆ ಹೆಂಗಸರು ಹಾಡುವ ಬೇರೆಬೇರೆ ಸಂದರ್ಭದ ಹಾಡುಗಳ ಸಂಗ್ರಹ. ಇದರಲ್ಲಿ ಕೆಲವು ಕಾವ್ಯ ಲಕ್ಷಣದ ಪದಗಳೂ ಕೆಲವು ಬರೇ ವರ್ಣನೆಯ ಪದಗಳೂ ಇದ್ದು ಮದುವೆಯನ್ನು ಅದರ ಪಾವಿತ್ರ್ಯವನ್ನು ಕಣ್ಣಿಗೆ ಕಟ್ಟುವಂತೆ ಎಳೆ-ಎಳೆಯಾಗಿ

ಬಿಡಿಸುತ್ತದೆ. ಲಕ್ಷ್ಮೀನಾರಾಯಣರೆಂದು ವಧು–ವರರನ್ನು ನಿರ್ಧರಿಸುವ ಈ ಗಳಿಗೆಯನ್ನು ಜನಪದ ಕವಯಿತ್ರಿಯರು ತಮ್ಮ ಕಣ್ಣಿಗೆ ಕಂಡಂತೆ ವರ್ಣಿಸಿರುವುದು, ಅದರಲ್ಲಿ ತುಂಬ ದೈವೀ ಭಾವನೆಗಳನ್ನು ಹೆಣೆದಿರುವುದು ಈ ಪದಗಳ ವೈಶಿಷ್ಟ್ಯ. ಒಟ್ಟಾರೆ ಜನಪದದ ಒಂದು ಮಟ್ಟನ್ನು ಚಿತ್ರಿಸುವಲ್ಲಿ ಸೀಮಿತವಾದ ಚಿತ್ರಣ ಕೊಡುತ್ತದೆ. ಈ ದಿಸೆಯಲ್ಲಿ ತುಂಬಾ ಕೆಲಸ ಮಾಡಿರುವುದು ಸ್ವಾಗತಾರ್ಹ" ಎಂದು ಹಾಸನದ 'ಜನಮಿತ್ರ' ಪತ್ರಿಕೆ, ೨೦–೧೦–೧೯೭೨ರ ಸಂಚಿಕೆಯಲ್ಲಿ ಶ್ಲಾಘನೀಯ ಮಾತುಗಳನ್ನಾಡಿದೆ.

"ಸೋಬಾನೆ ಪದಗಳು" ಇದೊಂದು ಜನಪದ ಗೀತೆಗಳ ಸಂಗ್ರಹ, ಶ್ರೀಯುತ ಸ್ವಾಮಿಗೌಡರು ತಮ್ಮ ಜಿಲ್ಲೆಯ ಸಾಹಿತ್ಯವನ್ನು ಸಂಗ್ರಹಿಸಿ ಅವರ ವೈಶಿಷ್ಟ್ಯ ಮೆರೆಸಿದ್ದಾರೆ. ಹೀಗೆಯೇ ಎಲ್ಲಾ ಜಿಲ್ಲೆಯವರೂ ಮಾಡಿದರೆ ಅಲ್ಲಲ್ಲಿಯ ಸೊಬಗು ಸೌಂದರ್ಯಗಳನ್ನು ಎಲ್ಲರೂ ಕಾಣಲಿಕ್ಕೆ ಅವಕಾಶ ದೊರೆಯುವುದು ಎಂದು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆ ತನ್ನ ೨೯–೦೧–೧೯೭೩ರ ಪತ್ರಿಕೆಯಲ್ಲಿ ಪ್ರಶಂಸೆ ವ್ಯಕ್ತಪಡಿಸಿದೆ.

ಶ್ರೀಯುತರ ಐದನೆ ಕೃತಿ 'ಜನಪದ ಕಥನಗೀತೆಗಳು' ೧೯೭೬ರಲ್ಲಿ ಪ್ರಕಟಿತವಾಗಿದೆ. ಡಾ। ಮಳಲಿ ವಸಂತ ಕುಮಾರ್‌ರವರು ಮುನ್ನುಡಿ ಬರೆದು ಹಾರೈಸಿದ್ದಾರೆ. ಈ ಕೃತಿಯನ್ನು ಸಾಹಿತ್ಯ ಹಿತೈಷಿಗಳಾದ ಹಾಸನದವರಾದ ಸೆಕ್ರೆಟರಿಯೇಟ್‌ನ ನಿವೃತ್ತ ಗ್ರಂಥಾಧಿಕಾರಿಗಳಾದ ಡಿ.ಆರ್. ಚನ್ನೇಗೌಡರಿಗೆ ಗೌರವಪೂರ್ವಕವಾಗಿ ಅರ್ಪಣೆಮಾಡಿದ್ದಾರೆ.

ಕನ್ನಡ ಜನಪದ ಗೀತೆಗಳಲ್ಲಿ ಕಥನಗೀತೆಗಳನ್ನು ಆರಿಸಿ ಸಂಗ್ರಹಿಸಲಾಗಿದೆ. ಲಾವಣಿ ಧಾಟಿಯ ಕಥನಗೀತೆಗಳು ಈ ಸಂಗ್ರಹದ ವೈಶಿಷ್ಟ್ಯ. ಹಾಸನ ಮಲೆನಾಡು ಮತ್ತು ಬಯಲು ಸೀಮೆಗಳ ವಿಶಿಷ್ಟ ರೂಪವಿದೆ. ಈ ಗೀತೆಗಳಲ್ಲಿ ಕಾವ್ಯದ ಸೊಂಪೂ ಲಾವಣಿಯ ಲಾಸ್ಯವೂ ತ್ರಿಪದಿಗಳ

ಲಯಬದ್ಧತೆಯೂ ಇದೆ. ಜನಪದ ಸಾಹಿತ್ಯದಲ್ಲಿ ಕಥನ ಗೀತೆಗಳಿಗೆ ಅತ್ಯುನ್ನತ ಸ್ಥಾನವಿದೆ. ತಮ್ಮ ಬದುಕು ಬರಹಗಳಲ್ಲಿ ಜಾನಪದವನ್ನು ಮೈಗೂಡಿಸಿಕೊಂಡಿರುವ ಲೇಖಕರದು ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡಿದ್ದಾರೆ.

ಇದನ್ನೇ ಸಾಹಿತಿ ಡಾ. ಸಿ.ಪಿ.ಕೆ. ಅವರು 'ಜನಪದ ಕಥನಗೀತೆಗಳು ಹಳ್ಳಿಯ ಬಾಳಿನ ವಿಶ್ವಕೋಶಗಳು' ಎಂದಿದ್ದಾರೆ. ಇದು ಹನ್ನೆರಡು ಜನಪದ ಕಥೆಗಳ ಸಂಕಲನವಾಗಿದ್ದು, ಹಾಸನ ಜಿಲ್ಲೆಯಲ್ಲೇ ಸಂಗ್ರಹವಾದವುಗಳಾಗಿದ್ದು ಒಂದೊಂದೂ ವಿಶಿಷ್ಟವಾಗಿವೆ.

ಅವರ ಕೃತಿಗಳಲ್ಲಿ ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯದ ಬಗ್ಗೆ ಅವರಿಗಿರುವ ಆಳ ಅಧ್ಯಯನ, ಸಂಶೋಧನಾ ದೃಷ್ಟಿ ಮತ್ತು ವಸ್ತುನಿಷ್ಠ ಮನೋಭಾವ ವ್ಯಕ್ತಗೊಳ್ಳುತ್ತದೆ. ಒಂದು ಸಂಸ್ಥೆ ಮಾಡಬಹುದಾದ ಕಾರ್ಯವನ್ನು ಸ್ವಾಮಿಗೌಡರೊಬ್ಬರೇ ಮಾಡಿದ್ದಾರೆ. ಸ್ವಯಂ ಕವಿಗಳೂ ಕತೆಗಾರರೂ ಪ್ರಬಂಧಕಾರರೂ ಆದ ಇವರ ಬರಹಗಳು ನಾಡಿನ ಹಲವಾರು ಹೆಸರಾಂತ ಪತ್ರಿಕೆಗಳಲ್ಲಿ ಬೆಳಕುಕಂಡಿವೆ.

'ಮರೆಯಲಾಗದ ಮಾತೆ' ಇವರ ಆರನೆ ಕೃತಿ, ಕವನ ಸಂಗ್ರಹವಾಗಿ ೧೯೯೮ರಲ್ಲಿ ಪ್ರಕಟಗೊಂಡಿದೆ. ಇದಕ್ಕೆ ಮುನ್ನುಡಿಯನ್ನು ಹಾಸನ ಜಿಲ್ಲೆಯವರೇ ಆದ ನಾಡಿನ ಹೆಸರಾಂತ ಲೇಖಕರೂ ವಿಚಾರವಾದಿಗಳೂ ವೈಚಾರಿಕ ಲೇಖಕರೂ ವಿಮರ್ಶಕರೂ ಆದ ಜ.ಹೊ. ನಾರಾಯಣ ಸ್ವಾಮಿ ಅವರು ಬರೆದು ಶುಭಹಾರೈಸಿದ್ದಾರೆ. ಈ ಕೃತಿಯನ್ನು ಲೇಖಕರೂ ಕವಿಗಳೂ ನಿವೃತ್ತ ಪ್ರಾಂಶುಪಾಲರೂ ಆಗಿದ್ದ ದಿವಂಗತ ಪ್ರೊ. ಡಿ.ಸಿ. ಅನಂತಸ್ವಾಮಿ (ನಿಧನ ೧೯೭೭) ಅವರ ನೆನಪಿಗಾಗಿ ಅರ್ಪಣೆ ಮಾಡಿದ್ದಾರೆ.

ಇದರಲ್ಲಿ ಒಟ್ಟು ೩೨ ಕವನಗಳಿವೆ. ಇದರಲ್ಲಿ ಎಲ್ಲವೂ ಕವನಗಳೇ ಆಗಿರದೆ, ಲಾವಣಿ, ಕಥನಕವನ, ಚುಟುಕ ಹೀಗೆ ವಿವಿಧ ಪ್ರಕಾರಗಳಿಂದ

ಕೂಡಿವೆ. 'ಮರೆಯಲಾಗದ ಮಾತೆ' ಶೀರ್ಷಿಕೆಯ ಕವನ ಒಂದು ಜನಪದ ಜೀವನದ ಪ್ರತಿಬಿಂಬವಾಗಿ ಕಂಡರೂ ಅದರ ಅಂತರಂಗದ ಆಶಯ ಮಾನವೀಯವಾದುದು. ನಾಗರೀಕತೆ ಬೆಳೆದು ಯಾಂತ್ರಿಕತೆಗೆ ಒಳಗಾದ ಇಂದಿನ ಬದುಕಿನ ವಿದಾಯವನ್ನು ಸೂಚಿಸುತ್ತದೆ. ಈಕೆ ಕುರುಡಿಯಾದರೂ ಜನಪದದ ಬದುಕಿನೊಂದಿಗೆ ಒಂದಾದವಳು. ಕಣ್ಣಿದ್ದವರಿಗಿಂತ ಮಿಗಿಲಾದ ಬದುಕು ನೀಡಿದವಳು. ನಡೆನುಡಿಯಲಿ ಪದಕಲಿತು ಜನಪದದೊಂದಿಗೆ ಒಂದಾದ ಜೀವ. ಆಕೆ ತನ್ನದಾಗಿಸಿಕೊಳ್ಳದ ಸದ್ಗುಣಗಳಿಲ್ಲ, ಹಾಡದ ಹಾಡುಗಳಿಲ್ಲ. ಗಾದೆಗಳ ಗಣಿ. ಸೋಬಾನೆ ಹಾಡು, ರಾಗಿಬೀಸುವ ಹಾಡು, ಒತ್ತಕುಟ್ಟುವ ಹಾಡು, ಮಕ್ಕಳಾಟದ ಹಾಡುಗಳಿಂದ ಅವಳ ಹೃದಯ ಶ್ರೀಮಂತವಾಗಿದೆ. ಎಲ್ಲರನ್ನೂ ಒಡಹುಟ್ಟಿದವರೆಂದು ಭಾವಿಸಿ ಆದರಿಸುವ ಸುಸಂಸ್ಕೃತ ಜೀವ. ಇವಳ ಜೀವನ ಕಣ್ಣಿದ್ದೂ ಕುರುಡಾದವರ ಬದುಕಿನ ಒಳಕಣ್ಣನ್ನು ತೆರೆಸುತ್ತದೆ.

ಸ್ವಾಮಿಗೌಡರು ಸಂಗ್ರಹಿಸಿದ ಜನಪದ ಗ್ರಂಥಗಳ ವಿಶ್ಲೇಷಣೆ :

ಕನ್ನಡ ಜಾನಪದವು ವೈಜ್ಞಾನಿಕವಾಗಿ ಅಧ್ಯಯನಕ್ಕಾಗಿ ಎಚ್ಚರಗೊಂಡಾಗ ಕರ್ನಾಟಕದಾದ್ಯಂತ ಅನೇಕ ವಿದ್ವಾಂಸರು ವಿಚಾರವನ್ನು ಕೈಗೆತ್ತಿಕೊಂಡರು. ಇಂಥಾ ಆಂದೋಲನಕ್ಕೆ ಕೈಜೋಡಿಸಿದವರಲ್ಲಿ ಹಾಸನ ಸುತ್ತ ಪ್ರಮುಖವಾಗಿ ಮತಿಘಟ್ಟ ಕೃಷ್ಣಮೂರ್ತಿ, ಗೊರೂರು, ಎಸ್.ಕೆ. ಕರೀಂಖಾನ್ ಮತ್ತು ಪಂಡಿತಸ್ವಾಮಿಗೌಡರು ಕಾಣುತ್ತಾರೆ.

ಪಂಡಿತ ಸ್ವಾಮಿಗೌಡರು ಅಂದು ಕೇವಲ ಒಬ್ಬ ಉಪಾಧ್ಯಾಯರಾಗಿ ಉಳಿದಿದ್ದರೆ, ನೂರಾರು ಅಧ್ಯಾಪಕರಲ್ಲಿ ಅವರೊಬ್ಬರಾಗುತ್ತಿದ್ದರು. ಆದರೆ ಹಣದ ಮುಗ್ಗಟ್ಟಿನಲ್ಲಿಯೂ ಕೌಟುಂಬಿಕ ಬಡತನದಲ್ಲಿಯೂ ಸಾಹಿತ್ಯದ ಕಡೆ ಒಲಿದ ಕಾರಣ ಕನ್ನಡ ಪಂಡಿತ ಪರೀಕ್ಷೆ ಮಾಡಿಕೊಂಡು ಮುಂದುವರಿಯುತ್ತ

ಅಂದಿನ ಜಾನಪದ ಕ್ಷೇತ್ರದ ದಿಗ್ಗಜರ ಕಡೆ ಹೆಜ್ಜೆಹಾಕುತ್ತಾರೆ. ಆ ನಿಟ್ಟಿನಲ್ಲಿ ಬಂದ ಕೃತಿಗಳಲ್ಲಿ ಮೂರು ಕೃತಿಗಳು ಪ್ರಕಟಗೊಂಡು ಪ್ರಧಾನ ವಿಚಾರಗಳನ್ನು ಒಳಗೊಂಡಿವೆ. ಅವರ ಮೊದಲ ಕೃತಿ ೧೯೬೦ರಲ್ಲಿ ಬಂತು. ಹೀಗೆ ಪುಸ್ತಕ ತರುವ ವಿಚಾರವು ಸಾಧನೆಯದು, ಯಾರ್ಯಾರನ್ನೋ ಕೇಳುವುದು. ಲಕ್ಕಿಡಿಪ್ ಮಾಡಿ ಆಶ್ವಾಸನೆನೀಡುವುದು, ಬೆಂಗಳೂರಿನ ವಕ್ಕಲಿಗರ ಸಂಘದಿಂದ ಹೊರಡುತ್ತಿದ್ದ ಪತ್ರಿಕೆಯಲ್ಲಿ ಸಂಗ್ರಹಿಸಿದವುಗಳನ್ನು ಪ್ರಕಟಿಸುವುದು, ನಾಡಿನ ಸ್ಥಳೀಯ ಹಾಗೂ ಇತರೆ ಪತ್ರಿಕೆಗಳನ್ನು ಪತ್ತೆಹಚ್ಚಿ ಪ್ರಕಟಿಸುವುದು ಇವೆಲ್ಲಾ ಒಬ್ಬ ಕನಸುಕಂಡ ವಿದ್ವಾಂಸರಿಂದ ಮಾತ್ರಸಾಧ್ಯ. ನಾಡಿನ ಎರಡು ಸಂಪ್ರದಾಯಗಳಾದ ವೈಷ್ಣವ ಮತ್ತು ಶೈವ ಮೂಲದಲ್ಲಿ ರಾಮಾನುಜರು ಹಾಸನ ಸೀಮೆಯಲ್ಲಿ ಆಳುವ ದೊರೆಯನ್ನೇ ತನ್ನ ಪಕ್ಷಕ್ಕೆ ಸೇರಿಸಿಕೊಂಡ ಕಾರಣ ಸ್ವಭಾವಿಕವಾಗಿ ಅಲ್ಲಿಯ ಜನಸಮೂಹ ಅತ್ತ ಒಲಿಯುತ್ತದೆ. ಹೀಗೆ ಒಲಿದ ವಿಧಾನದಲ್ಲಿ ಮೂಲಸಂಪ್ರದಾಯಕ್ಕೆ ಹತ್ತಿರವಾದ ಕತ್ತರಿ ಘಟ್ಟದ ಹರಿಸೇವೆಗೆ ದಾಸಸಂಪ್ರದಾಯವು ಒಲಿಯುತ್ತದೆ. ರಾಮಾನುಜರು ಒಲಿದ ಹರಿಯು ತಿರುಪತಿಯ ವೆಂಕಟರಮಣನಿಗೆ ತಾದಾತ್ಮವಾಗಿ ತನ್ನ ಭಕ್ತರಿಂದ ಸೇವೆ ರೂಪದಲ್ಲಿ ಹರಕೆ ಮರಿಗಳನ್ನು ಸ್ವೀಕರಿಸುತ್ತಾನೆ. ತಿರುಪತಿಗೆ ಹೋಗಿಬರುವ ಭಕ್ತರು ಗೋವಿಂದಾ ಗೋವಿಂದಾ ಎಂದು ಹೋಗಿ ಬಂದು ಇಲ್ಲಿನ ಹಳ್ಳಿಯ ಜನಕ್ಕೆ ಊಟಹಾಕುತ್ತಾರೆ. ಈ ರೀತಿ ಇಪ್ಪತ್ತೆಂಟು ಹಳ್ಳಿಗಳಲ್ಲಿಯೂ ಸೇರಿ ಹರಕೆ ಒಪ್ಪಿಸುವ ಕೂಟವೇ ಕತ್ತರಿಘಟ್ಟಸೇವೆ. ಇದು ಒಂದು ರೀತಿ ಮರಿತಿರುಪತಿ ಸೇವೆಯಂತೆ. ಇದು ಆಧುನಿಕ ಕಾಲಕ್ಕೆ ಒಪ್ಪಿಕೆ ವಿಚಾರ ಹೌದೋ ಅಲ್ಲವೋ ಬೇರೆ ವಿಚಾರ. ಆದರೆ ಸಾಂಸ್ಕೃತಿಕ ಆಧ್ಯಯನ ದೃಷ್ಟಿಯಿಂದಲಂತೂ ಉತ್ತಮ ಆಕರಗಳನ್ನೊಳಗೊಂಡ ಸಂಗತಿಗಳುಂಟು. ಈ ಹರಿಸೇವೆಯಲ್ಲಿ ವಕ್ಕಲಿಗರ ದಾಸಸಂಪ್ರದಾಯ ಹೆಚ್ಚಾಗಿದ್ದರೂ 'ಹರಿಸೇವೆ'ಯಲ್ಲಿ ಎಲ್ಲ ಜಾತಿಯು ದಾಸವಕ್ಕಲುಗಳಿದ್ದಾರೆ. ಕರ್ನಾಟಕದ

ಗಂಗಡಿಕಾರರೆಂಬುವರು ಗಂಗಾಮೂಲದವರು, ಪಶುಪಾಲನಾ ವೃತ್ತಿಯಿಂದ ಚಲಿಸಿ ನಿಂತವರು. ಗಂಗಾರಾಜವಂಶಸ್ಥರಾಗಿ ಆಳಿದವರು. ಇವೆಲ್ಲಾ ವಿಚಾರಗಳಲ್ಲಿ ಗಂಗಡ ಎಂಬ ಪದವನ್ನು ಗೊಂಗಡಿ ಎಂಬ ಮೂಲಪದದಿಂದ ಬಿಡಿಸಿದರೆ ಪಶುಪಾಲನೆ ಎಂಬ ಅರ್ಥವೇ ಬರುತ್ತದೆ. ಗೊಂಗಡಿ ಎಂಬುದಕ್ಕೆ ಅರ್ಥ ಕಂಬಳಿ ಎಂದುಂಟು. ಈ ಗಂಗಡಿಕಾರರಲ್ಲಿ ಎರಡು ಬಗೆ; ಒಂದು ಭೈರವನ ರೂಪದ ಮುಳ್ಳುಜನ, ಮತ್ತೊಂದು ವಿಷ್ಣುವಿನ ರೂಪದ ದಾಸ ಜನ. ಈ ದಾಸರಲ್ಲಿ ಹರಿಜನರೂ ಉಂಟು, ಹರಿಜನರಲ್ಲಿ ಗಂಗಡಿಕಾರರೂ ಉಂಟು. ಅಂದಾಗ ಇದೊಂದು ಜನಾಂಗ ಸೂಚಕವೇ ಹೊರತು ಜಾತಿಸೂಚಕವಲ್ಲ. ಇಂಥಾ ಸಾಂಸ್ಕೃತಿಕ ಕೊಂಡಿಗಳನ್ನೆಲ್ಲಾ ಸ್ವಾಮಿಗೌಡರ ಕೃತಿಯಿಂದ ಬಿಡಿಸಿಕೊಳ್ಳಬಹುದು. ವಸ್ತುನಿಕರವಾಗಿದ್ದರೆ ಮುಂದಿನ ಅಧ್ಯಯನಕಾರರು ಹೇಗಾದರೂ ಯಾವತ್ತಾದರೂ ಅಂತಾ ಲಾಭ ಪಡೆದುಕೊಳ್ಳಬಹುದೆನ್ನುವುದಕ್ಕೆ ನಮ್ಮ ಹಿಂದಿನ ಇಂಥಾ ಮಹನೀಯರು ನೆರವಾಗಿದ್ದಾರೆ.

ಮುಂದಿನ ಕೃತಿ 'ಕನ್ನಡ ಸಾಹಿತ್ಯ ಶ್ರೀಗೆ ಹಾಸನ ಜಿಲ್ಲೆಯ ಕೊಡುಗೆ'. ಇದರಲ್ಲಿ ಸಹಾ ಹಲ್ಮಿಡಿ ಶಾಸನ ಕುರಿತ ವಿಚಾರ ಹಿಡಿದು ಅನೇಕ ವಿಚಾರಗಳಿವೆ. ಸ್ವಾಮಿಗೌಡರು ಕನ್ನಡ ಪಂಡಿತರಾಗಿ ಸಾಹಿತ್ಯ ಮತ್ತು ಜಾನಪದವನ್ನು ಅರ್ಥೈಸಬಲ್ಲವರಾಗಿದ್ದ ಕಾರಣ ಅಧ್ಯಯನಕಾರರಿಗೆ ಉಪಯುಕ್ತ ವಿಚಾರಗಳನ್ನು ಒದಗಿಸುತ್ತಾರೆ. ಹಾಸನ ಸೀಮೆ ಇಂದು ಮಲೆನಾಡಿನ ಅಂಚಿನಲ್ಲಿರುವಂತೆ ಕಂಡರೂ ಪ್ರಾಚೀನ ಮೂಲದಲ್ಲಿ ಮಲೆನಾಡೇ ಹೌದು. ಅಸ್ಸೈ+ಅಣ್ಯೆ=ಹಾಸನ ಎಂದಾಗಿದೆ. ಇದರ ಅರ್ಥ ವನಪ್ರದೇಶ. ಭಾಷಾಶಾಸ್ತ್ರದಲ್ಲಿ ಇದು ವೈಜ್ಞಾನಿಕ ನಿಷ್ಪತ್ತಿ. ಅಲ್ಲಿನ ಹಾಸನಾಂಬದ ಪುರಾಣ ಕತೆ, ದೇವಸ್ಥಾನದ ಪಕ್ಕದಲ್ಲಿರುವ ಸಿದ್ಧೇಶ್ವರನು ಮೈಲಾರಲಿಂಗನ ಆಕರ. ಅದರ ಮೇಲಿರುವ ನಾಯಿಯ ಚಿತ್ರ ಇವೆಲ್ಲವೂ ಪಶುಮೂಲದ ಸಂಸ್ಕೃತಿಯನ್ನು ಹೇಳುತ್ತದೆ.

ಮೂರನೆಯ ಬಹು ಉಪಯುಕ್ತ ಕೃತಿ 'ಸೋಬಾನೆ ಪದಗಳು'. ಇದು ನಾಗೇಗೌಡರ 'ಸೋಬಾನೆ ಚಿಕ್ಕಮ್ಮನ ಪದ'ಗಳಿಗೆ ಹೋಲುತ್ತದೆ. ಸೋಬಾನೆ ಎಂಬುದು ರೈತಾಪಿ ಮೂಲದ ಜೀವಾಳ. ಹುಟ್ಟು, ಮದುವೆ, ಸಾವು ಈ ನಡುವೆ ಬದುಕಿನ ಉಲ್ಲಾಸಗಳೇ ಜೀವನ. ಇದೆಲ್ಲವನ್ನು ಸ್ವಾಮಿಗೌಡರು ಪ್ರಮಾಣಿಕವಾಗಿ ಕುಳಿತು ಸಂಗ್ರಹಿಸಿ ನಮ್ಮ ಮುಂದಿಟ್ಟಿದ್ದಾರೆ. ಉಪಯೋಗವಾದರೆ ಪಡೆದುಕೊಳ್ಳಿ ಎಂಬುದೇ ಅವರ ಬಯಕೆ.

ನಾಲ್ಕನೆಯ ಕೃತಿಯೆಂದರೆ 'ಜನಪದ ಕಥನ ಗೀತೆಗಳು' ೧೯೭೬ರಲ್ಲಿ ಪ್ರಕಟಗೊಂಡಿದ್ದು. ವೈಯಕ್ತಿಕವಾಗಿ ಇಂಥಾ ಸಂಗ್ರಹಿಸಿದ್ದನ್ನು ಸ್ವಂತವಾಗಿ ಪ್ರಕಟಗೊಳಿಸುವುದು ಅಂದು ಸುಲಭದ ಮಾತಲ್ಲ. ಗೌಡರಿಗೆ ಅಂದು ಕರಾಕೃ, ಜೀಶಂಪ, ಸಿಪಿಕೆ, ದೇಜಗೌ, ಹಾಮಾನಾ, ಮಳಲಿ ಇಂಥವರು ಒಡನಾಡಿಯಾಗಿದ್ದಾರೆ. ಗೊರೂರು, ಮತಿಘಟ್ಟ ಕೃಷ್ಣಮೂರ್ತಿ ಅಂತಹವರ ಸ್ನೇಹವೂ ಇದೆ. ಒಬ್ಬ ಪಂಡಿತ ಮಾಸ್ತರಾಗಿ ವಿಶ್ವವಿದ್ಯಾನಿಲಯಗಳಲ್ಲಿ ಸಂಪರ್ಕವನ್ನಿಟ್ಟುಕೊಂಡು ಜಾನಪದವನ್ನು ವ್ಯೆಗಂಟಿಸಿಕೊಂಡು ಓಡಾಡುತ್ತಿದ್ದುದು ಅವರ ವಿಶೇಷ. ಸಂಪನ್ನ ಹೃದಯದ ಇವರು ಹೇಮಾವತಿ ಅಣೆಕಟ್ಟಿಗಾಗಿ ವಸತಿಹೀನರಾಗಿ ತಿರುಗುತ್ತಲೇ ಬಹಳ ನೊಂದ ಹೃದಯಿಯೂ ಹೌದು. ಈ ನೊಂದ ಹೃದಯಕ್ಕೆ ಅವರು ಸಂಗ್ರಹಿಸಿದ ಇಂಥಾ ಹಾಡುಗಳು ಸಾಂತ್ವನ ನೀಡಿರಬೇಕು. ಇಂಥ ಜಾನಪದ ವಿದ್ವಾಂಸರು ಸೃಜನಶೀಲ ಸಾಹಿತ್ಯದ ಕಡೆಗೆ ಹೆಚ್ಚಾಗಿ ಕಾಲಿಟ್ಟಿದ್ದರೆ ಅಲ್ಲೂ ಬೆಳೆಯುತ್ತಿದ್ದರು ಎಂಬುದಕ್ಕೆ ಜೀಶಂಪ, ರಾಗೌ, ಸಿಪಿಕೆ, ಸ್ವಾಮಿಗೌಡರು ಎಲ್ಲರೂ ಉದಾಹರಣೆಯಾಗುತ್ತಾರೆ. ಹಾಗಾಗಿ ಸ್ವಾಮಿಗೌಡರು ಸಹಾ 'ಮರೆಯಲಾಗದ ಮಾತೆ' ಎಂಬ ಕವನ ಸಂಗ್ರಹ ಪ್ರಕಟಿಸಿದ್ದುಂಟು. 'ಭಕ್ತ ಚಂದ್ರಹಾಸ' ಎಂಬ ಪುರಾಣ ಮೂಲದ ಪುಸ್ತಕ ಪ್ರಕಟಿಸಿದ್ದುಂಟು. 'ತೋಟದ ರಂಗಪ್ಪ' ಎಂಬ ಕಿರು ಕಾದಂಬರಿ ಬರೆದಿದ್ದಾರಂತೆ. ಅದು ಉತ್ತಮ ಗ್ರಾಮಸಂಗತಿಯ ಸಾಹಿತ್ಯವಾಗಿರಬಹುದು.

ಅದರ ಪ್ರಕಟಣೆಯಾದರೆ ಅವರ ಆತ್ಮಕ್ಕೆ ಶಾಂತಿ ದೊರಕೀತೇನೊ! 'ಜನಪದ ಕಥನ ಗೀತೆಗಳು' ಇದರಲ್ಲಿ ಹನ್ನೆರಡು ಜನಪದ ಕಥನಗಳಿವೆ. ಅಂದು ಲಿಖಿತ ಸಂಪ್ರದಾಯದ ಸಂಗ್ರಹವಾದ್ದರಿಂದ ಬಹುಕಷ್ಟಪಟ್ಟು ಎಲ್ಲೂ ಸಂಗ್ರಹಶಾಸ್ತ್ರಕ್ಕೆ ಅಪಚಾರವಾಗದಂತೆ ನೋಡಿಕೊಂಡಿದ್ದಾರೆ. ಪಲ್ಲವಿಗಳನ್ನಾಗಲಿ, ವಿವರಣೆಗಳನ್ನಾಗಲಿ, ಸಾಲು ವಿಭಜನೆಗಳನ್ನಾಗಲೀ ಬಹಳ ಜಾಗ್ರತೆಯಿಂದ ಕಾಪಾಡಿಕೊಂಡಿದ್ದಾರೆ. ಇದು ಒಬ್ಬ ನಿಷ್ಠಾವಂತ ಜಾನಪದ ಸಂಗ್ರಾಹಕನ ವಿಧಾನ. ಪಂಡಿತರಾಗಿ ಜಾನಪದ ಶಾಸ್ತ್ರಿಯ ಅಧ್ಯಯನವನ್ನು ತಿಳಿದುಕೊಂಡು ಹೆಜ್ಜೆ ಇಟ್ಟಿದ್ದಾರೆ. ಕತೆ ಹೇಳಿದವರೆಲ್ಲಾ ಅವರ ಗ್ರಾಮದ ಸುತ್ತಲಿನವರು. ಈ ಪಂಡಿತರು ಹಳಗನ್ನಡವನ್ನು ಬಹಳ ಚೆನ್ನಾಗಿ ಅಭ್ಯಾಸಮಾಡಿಕೊಂಡಿದ್ದರು. ಇವರು ಸ್ಥಳೀಯವಾಗಿ ಅಂದು ಉತ್ತಮ ಗಮಕಿಯಾಗಿದ್ದರು. ಜೈಮಿನಿ ಭಾರತವನ್ನು ಓದುವುದನ್ನು ಬಿಟ್ಟು ಅದೆಂತದೊ ಹಳ್ಳಿಹಾಡು ಕೇಳೋಕೆ ಹೋಗ್ತನಂತೆ ಬಿದ್ಕೊಳ್ಳೊ ಎಂದು ತಂದೆಯು ನಿದ್ದೆಯಿಂದ ಎಚ್ಚೆತ್ತು ಹೋಗುತ್ತಿದ್ದ ಮಗನಿಗೆ ಬೈದಾಗ ನಿದ್ದೆಯಿಂದ ಕದ್ದು ಎದ್ದು ಹೋಗಿ ಬೆಳಗಾಗುವವರೆಗೂ ಜನಪದ ಕಥನಗೀತೆಗಳನ್ನು ಕೇಳಿಬಂದ ವಿಚಾರವನ್ನು ಹೇಳುತ್ತಾರೆ. "ಹಾರುವ ಕೆಟ್ಟು ಹಳೆ ಕಡತನ ಹುಡುಕಿದನಂತೆ". "ನೀನೊಂದು ನಾಯಿ, ನಾಯಿ ಸಿಕ್ಕಿದ ಮೂಳೆಯನ್ನೆಲ್ಲಾ ಗುಡ್ಡೆಹಾಕಿಕೊಂಡು ಅದರಲ್ಲೇನೂ ಸ್ವಾರಸ್ಯವಿಲ್ಲದಿದ್ದರೂ ತನ್ನ ರಕ್ತವನ್ನು ತಾನೇ ನೆಕ್ಕುತ್ತಂತೆ, ಹಾಗೆ ನಿನ್ನ ಪಾಡು" ಮನೇಲಿರೋ ರಾಮಾಯಣ ಮಹಾಭಾರತ ಓದಿಕೊಂಡು ಬಿದ್ಕೋಬಾರ್ದೆ ಎಂದು ಅವರಪ್ಪ ಬೈದೇಬಿಡುತ್ತಿದ್ದರಂತೆ. (ಜನಪದ ಕಥನಗೀತೆಗಳು ಪುಟ ೬೨). ಇದು ಸ್ವಾಮಿಗೌಡರು ಬರೆದುಕೊಳ್ಳುವ ವಿಚಾರ. ಜನಪದ ಸಂಗ್ರಹಣೆಗೆ ಅಂದು ಮುಗಿಬಿದ್ದು ವಿದ್ವಾಂಸರುಗಳು ಹಳ್ಳಿಕಡೆ ಚಾವುಡಿಗೆ, ಮನೆಮನೆ ತಿರುಗಿದಾಗ ಹಿರಿಯರು ಹೇಳುತ್ತಿದ್ದ ಈ ವಿಚಾರವು ಹಳತು ಮಾಸಿ ಅಕ್ಷರಸ್ಥ ಕೃತಿಗಳ ಕಡೆ ಒಲಿದು ಮಕ್ಕಳನ್ನು ಗದರಿಸುತ್ತಿದ್ದ ಸಂದರ್ಭದ್ದು. ಇದೆಲ್ಲವನ್ನು ಮೀರಿ ಸ್ವಾಮಿಗೌಡರಂತಹವರು ಜಾನಪದ ಸಂಗ್ರಹಣದ ಕಡೆ ಕೈಹಾಕಿದ್ದೇ ಕನ್ನಡ

ಜಾನಪದದಲ್ಲಿರುವ ಅಸ್ತಿತ್ವ, ಜೀವಂತ ಜಾನಪದವನ್ನು ಅಂದು ಇಂತಹವರು ಸಂಗ್ರಹಿಸದಿದ್ದರೆ ಇಂದು ಕನ್ನಡ ಜಾನಪದ ಇಷ್ಟೊಂದು ಪ್ರಭುದ್ಧವಾಗಿ ಬೆಳೆಯುತ್ತಿರಲಿಲ್ಲ. ಕೆಲವು ವಿದ್ವಾಂಸರೆನಿಸಿಕೊಂಡವರು ಜಾನಪದವನ್ನು ಹರುಕುಮುರುಕಾಗಿ ಬಳಸಿಕೊಂಡು ಮಿಂಚಲು ಹೋಗುತ್ತಿರುವವರ ನಡುವೆ ಇಂಥಾ ಮಹನೀಯರಿಗೆ ಸ್ಥಾನ ನೀಡಬೇಕಾಗುತ್ತದೆ. ಅದು ತಾನಾಗಿಯೇ ದಕ್ಕುವುದುಂಟು.

ಅವರ ಕೃತಿ 'ಜನಪದ ಕಥನ ಗೀತೆಗಳು' –ಇದರಲ್ಲಿರುವ ಕಥನಗೀತೆಗಳಿಗೆ ಗದ್ಯಸಾರ ನೀಡಿದ್ದಾರೆ. ಅರ್ಥವಿವರಣೆ ನೀಡಿದ್ದಾರೆ. ಇದು ಸವೆದುಹೋಗುತ್ತಿರುವ ಗ್ರಾಮೀಣ ಪದಗಳಿಗೆ ದಕ್ಕುವ ವಿಚಾರ. ಇದರಲ್ಲಿರುವ ಗೀತೆಗಳನ್ನು ಹಾಡ್ಗತೆಗಳಾಗಿ ವೃತ್ತಿಯೇತರ ಕಲಾವಿದರು ಹಾಡಿರುವುದು ಕಂಡುಬರುತ್ತದೆ. (ಇವುಗಳಲ್ಲಿ ಕೆಲವನ್ನು ವೃತ್ತಿಗಾಯಕರಾದ ಸ್ಥಳೀಯ ತಂಬೂರಿ ಸಂಪ್ರದಾಯದವರು ಹಾಡುವುದುಂಟು) 'ಕಾಡು ಸಿದ್ದಮ್ಮನ ಕತೆ'– ಕಿರಿರಾಣಿಯಾಗಿ ಇವಳನ್ನು ತಂದಾಗ ಸವತಿಯರು ಸೇಡುತೀರಿಸಿಕೊಂಡು ಹುಟ್ಟಿದ ಮಗುವನ್ನು ಸಾಗಿಸುತ್ತಾ ಹಿಡ್ಲುಮುಂಡಿ, ವನಕೆ, ರುಬ್ಬುಗುಂಡು ಹೆತ್ತಳೆಂದು ಬಿತ್ತರಿಸಿ ಅವಳನ್ನು ಗಂಡನ ಮೂಲಕ ಕಾಡುಪಾಲು ಮಾಡುವ ಕತೆ. ಕಡೆಯಲ್ಲಿ ಸುಖಾಂತವುಳ್ಳ ಕಥೆ. 'ಕಿರೆಬಳ್ಳೆ ಹಿರಿಬಳ್ಳೆ' ಎಂಬ ಕತೆ ಎತ್ತುಗಳ ಹೆಸರಿನ ಮೇಲಿನದು. ರೈತಾಪಿ ವೃತ್ತಿಯನ್ನು ತನ್ನಣ್ಣಂದಿರೇ ಹೇಳಿಕೊಡದೆ ಹಿಂಸೆ ನೀಡುತ್ತಿದ್ದಾಗ ತಮ್ಮನು ಶಿವರಾಯನ ಕರುಣೆ ಮೂಲಕ ಕಲಿತುಕೊಂಡ ಕತೆ. 'ಬೆಜ್ಜಾಣೆ' ಎಂಬ ಕತೆಯಲ್ಲಿ ಸಹೋದರರು ಗಂಡನ ಮನೆಯಲ್ಲಿ ಹೊಂದಿಕೊಳ್ಳಲಾಗದ ತಂಗಿಗೆ

"ಉಂಡಂತ ಊಟವ ಗಂಗಾಳ ಬಲ್ಲಾವು
ಗಂಡಾಡಿದ ಮಾತ ತೌರಲ್ಲಿ–ಹೇಳಲುಬೇಡ
ಹೊಂದಿಕೊಂಡಿದ್ದು ಬದುಕಮ್ಮ

ಎಂದು ಹೇಳುವ ನೀತಿಕತೆ. 'ಪತಿಭಕ್ತೆ ವೀರಾಜಿ' ಕತೆಯಲ್ಲಿ ಪತಿಯು ದಂಡಿಗೆ ಹೋದಾಗ 'ಮನಸ್ಸಿನಲ್ಲಿದ್ದುದು ಕನಸ್ಸಿನಲ್ಲಿರುತ್ತದೆ' ಎಂಬ ಮೂಲದ್ದು. ಇದು ಸತಿಯು ಅಗ್ನಿದಹನಕ್ಕೆ ತಾನಾಗಿಯೇ ಅಣಿಯಾಗುವಂತಹುದು. ಸತಿಸಹಗಮನ ಪದ್ಧತಿಯ ಪಳಯುಳಿಕೆ ರೀತಿಯದು. ಸಾಂಸ್ಕೃತಿಕ ಮೋಟಿವ್‌ಗಳುಳ್ಳ ಚಿಕ್ಕಕತೆ. 'ಶಂಕರಲಿಂಗನ ಸೋದರ ಪ್ರೇಮ' ಎಂಬ ಕತೆ ಮಲೆನಾಡುಕಡೆ ಘಟ್ಟದ ವ್ಯಾಪಾರಕ್ಕೋ ಸುಬ್ರಹ್ಮಣ್ಯ ಜಾತ್ರೆಗೋ ಹೋಗುವ ಸ್ವರೂಪದಲ್ಲಿದ್ದ ಸನ್ನಿವೇಶಗಳನ್ನೊಳಗೊಂಡದ್ದು. ಅತ್ತಿಗೆ ಹೊನ್ನಾಲುದೇವಿಯು ಮೈದುನನನ್ನು ಕೊಲೆ ಮಾಡಿಸಿದ್ದು ಗೊತ್ತಾದಾಗ ಅಣ್ಣನು ಅವಳನ್ನು ಜೀವಸಹಿತ ಸುಡಿಸಿದ ಕತೆ. 'ಶಿವಲೀಲೆ' ಎಂಬ ಕತೆಯಲ್ಲಿ ಶಿವನನ್ನು ಪಾರ್ವತಿಯೇ ತನ್ನ ತಂಗಿಯನ್ನು ಸವತಿಯಾಗಿ ತಂದುಕೊಳ್ಳಲು ಉತ್ತೇಜನ ನೀಡುತ್ತಾಳೆ. ಇದು ಕಲ್ಯಾಣದ ಬಸವಣ್ಣನು ಇಬ್ಬರು ಹೆಂಡತಿಯರನ್ನು ಸ್ವೀಕರಿಸಿದ ಬಗೆಗೆ ಹೋಲುವುದನ್ನು ಸಂಗ್ರಾಹಕರು ವಿಶ್ಲೇಷಿಸಿದ್ದಾರೆ. ಇದರ ಮುಂದಿನ ಕಥೆಯಾಗಿ ಕರಾಕೃ ಅವರು ಸಂಗ್ರಹಿಸಿರುವ 'ಗಂಗೆಗೌರಿ' ಕತೆಯಾಗಿದೆ ಎಂದು ಸಹಾ ಇಲ್ಲಿ ಸಂಗ್ರಾಹಕರು ಹೇಳಿದ್ದಾರೆ. 'ಸಂತಾನ ಸಾವ್ರಾಗಲಿ' ಎಂಬ ಕತೆಯಲ್ಲಿ ನಾರಾಯಣ ಹಾಗೂ ಶಿವನು ಜಮ್ಮನೇರಳೆ ಹಣ್ಣಿನ ಕೊಂಬೆಯಲ್ಲಿರುವ ಹಕ್ಕಿಯನ್ನು ನೋಡುತ್ತಾರೆ. ಹಕ್ಕಿಯನ್ನು ಕೊಂದುಬಿಡುತ್ತಾರೆ. ಹೆಣ್ಣುಹಕ್ಕಿ ಗೋಳಾಡುವುದನ್ನು ನೋಡಿ, ಹಣ್ಣು ಒಳ್ಳೆದೆಂದು ಹೂವು ಒಳ್ಳೆದೆಂದು ಅಲ್ಲಿ ಗೂಡುಕಟ್ಟಬೇಡ, ಅಡ್ಡಗುಡ್ಡವ ಸೇರು ಸಂತಾನ ಸಾವ್ರಾಗಲಿ ಎಂದು ಹರಸಿ ಜೀವ ಕೊಟ್ಟು ಕಳುಹಿಸುತ್ತಾರೆ. ಈ ಕತೆ ರಾಮಾಯಣ ಮೂಲಕ್ಕೆ ವಾಲ್ಮೀಕಿಗೆ ಕಾರಣವಾಗುವ ಸೂಚನೆಯಂತಿದ್ದು, ಜನಸಂಪರ್ಕದಿಂದ ಪ್ರಾಣಿ ಪಕ್ಷಿಗಳು ದೂರವಿರುವುದು ಒಳ್ಳೆಯದೆಂದು ಸೂಚನೆ ನೀಡುತ್ತದೆ. 'ಮಲ್ಲಿಗೆ ಹೂವಿನ ವಯ್ಯಾರಿ' ಸಿಪಾಯಿ ಒಬ್ಬನ ಹೆಂಡತಿಯಾದವಳು. ಅವನು ದಂಡಿಗೆ ಹೋದಾಗ ಮಿಂಡನನ್ನು ಜೊತೆಮಾಡಿಕೊಂಡು ಅದು ಆಡುವ ಮಗುವಿಗೆ ಗೊತ್ತಾದೀತೆಂದು ಮಗುವನ್ನೇ ಕೊಂದು; ಅದು ಗೊತ್ತಾದೀತೆಂದು ಗಂಡನನ್ನೇ

ಕೊಲ್ಲುವ ದುಃಖಾಂತ್ಯ ಕತೆ. 'ದೊಂಬರಚೆನ್ನಿ' ಎಂಬ ಕತೆಯಲ್ಲಿ ನಾಟ್ಯವಾಡುವ ದೊಂಬರ ಹುಡುಗಿಗೆ ಮನಸೋತ ಗುರುಸ್ವಾಮಿಯು ಲಿಂಗ ತೆಗೆದಿಟ್ಟು ಪ್ರೇಮಪಾಶಕ್ಕೆ ಒಳಗಾಗಿ ಹಿಂದಿಂದೆ ಹೋಗುವ ಪ್ರಸಂಗದ್ದು. ಅವಳು ಏನೇನು ನೆವ ಹೇಳಿ ತಿದ್ದಲು ಪ್ರಯತ್ನಿಸಿದರೂ ಕೇಳದೆ ಕತ್ತೆ ಹೊಡಕೊಂಡು ಪಟ್ಟಣಕ್ಕೆ ಹೊರಟೇಬಿಡುತ್ತಾನೆ. 'ಮೇಲುಕೋಟೆ ಚಲುವರಾಯ' ಕತೆಯಲ್ಲಿ ತುರುಕರ ಭಾಷೆ ಕಲಿತು ಚೆಲುವರಾಯ ತುರಕನ ಮಗಳ ತಂದುಬಿಡುತ್ತಾನೆ. ವಿಗ್ರಹಭೇದಕ ಮುಸಲ್ಮಾನ ದೊರೆಯ ಮಗಳು ಆಡಲು ತಂದುಕೊಟ್ಟ ಚಲುವನ ವಿಗ್ರಹ ನೋಡಿ ಅವನನ್ನು ಮೋಹಿಸಿ ಮದುವೆಯಾಗುವ ಕತೆ. ಅವಳೇ ವರನಂದಿಯಂತೆ. 'ಬಾಣಾವತಿ' ಎಂಬ ಕತೆಯಲ್ಲಿ ಮಕ್ಕಳಿಲ್ಲದ ರಾಜನು ಅವಮಾನ ತಡೆಯಲಾರದೆ ಒಳಲುತ್ತಾನೆ. ಹೆಂಡತಿಯು ಗರ್ಭವತಿಯಾದಾಗ ಪ್ರಸವಕ್ಕೆ ಮುಂಚೆಯೇ ಹೆಣ್ಣು ಹುಡುಕಿದರು. ಆದರೆ ಗಂಡುತೋರಿಸುವುದು ಹೇಗೆಂದು ಚಿಂತಿಸಿ, ಕುರುಬರ ಹುಡುಗನನ್ನು ತಮ್ಮ ಮಗನೆಂದೇ ತೋರಿಸಿದರು. ಹುಟ್ಟಿದ ಮಗುವಿಗೆ ಬೆಕ್ಕಸರಾಜನೆಂದು ಹೆಸರಿಟ್ಟು ಆಡುವ ಮಗುವಿಗೆ ಆತುರದಲ್ಲಿ ಉಪಾಯವಾಗಿ ಬಾಣಾವತಿಯನ್ನು ಮದುವೆ ಮಾಡಿ ಗಂಡ ಹೆಂಡತಿಯನ್ನು ಬಿಟ್ಟುಹೋದರು. ಹೆಣ್ಣಿನ ಅಣ್ಣಂದಿರಾದ ಹೆಣಶೂರ ರಣಶೂರರು ಈ ಮೋಸಕ್ಕೆ ಪ್ರತಿಯಾಗಿ ಕಾಡಿಗೆ ಕರೆದುಕೊಂಡು ಹೋಗಿ ಮಗುವನ್ನು ಸುಡಲು ಪ್ರಯತ್ನಿಸುತ್ತಾರೆ. ಮಗುವನ್ನು ಮದುವೆಯಾದ ಬಾಣಾವತಿ ಮಗುವನ್ನೇ ಗಂಡನೆಂದು ಸ್ವೀಕರಿಸಿ ಎಚ್ಚರದಿಂದ ಸಾಕಿ ಸಂಸಾರ ಮಾಡಿದಳು. 'ಕೊಡಗಿನ ರಾಜ' ನ ಕತೆ ವಿಸ್ತೃತವಾದ ಕೊಡಗಿನ ಚರಿತ್ರೆಗೆ ಸಂಬಂದಿಸಿದ ಕತೆ. ಮಡಕೇರಿ ಅರಸ ತಂಗಿಯನ್ನು ಭಾವನನ್ನು ಬಂಧಿಸುವ ಕತೆ. ಅವಳನ್ನು ಅಣ್ಣನೇ 'ಒಂದಿಗೂಟ ಮಾಡೋಣ ಬಾರೆ' ಎಂದು ಕರೆದು ಕಾಮುಕನಾಗುವ ಕತೆ. ಅವರು ತಪ್ಪಿಸಿಕೊಂಡು ಮೈಸೂರು ಸೇರಿ, ಕಂಪೆನಿಯವರ ಪಕ್ಷ ಸೇರಿ, ರಾಜನ ಮೇಲೆ ದಂಡೆತ್ತಿಬಂದು ಮಡಕೇರಿ ವಶಪಡಿಸಿಕೊಳ್ಳುತ್ತಾರೆ. ಚಾಡಿಕೋರ ಪೂರ್ಣಯ್ಯನ ಹುನ್ನಾರ, ಐಗೂರು ರಾಜ ಬಸಪ್ಪದೊರೆಯಾದ ಭಾವನು

ಹಾಗೂ ತಂಗಿ ನಿಂಗಮ್ಮನು ಕತೆಯಲ್ಲಿ ಬರುತ್ತಾರೆ. ತಂಗಿಯು ಕಿತ್ತೂರು ರಾಣಿ ಸ್ವರೂಪದಲ್ಲಿ ಹೋರಾಡುವುದು, ಮಗು ರಣದಲ್ಲಿ ಬಿದ್ದುಹೋಗುವುದು, ಸಿಕ್ಕಿದ ಮಗುವನ್ನು ಅವಳ ಅಣ್ಣನು ಬಾಗಲಿಗೆ ತೋರಣ ಕಟ್ಟಿಸುವುದು, ಪೆಟ್ಟಿಗೆ ತುಂಬಿ ಕಳುಹಿಸುವುದು, ಇದೆಲ್ಲಾ ಬರುತ್ತದೆ. 'ಮಡಕೇರಿ ಹಾಳಾಗಲೀ' ಎಂದು ತಂಗಿಯೇ ತೌರಿಗೆ ಶಾಪಕೊಡುತ್ತಾಳೆ. ಈ ಕತೆಯು ಕೃಷ್ಣನಕತೆಯನ್ನು ಹೋಲುತ್ತಾ ಪುರಾಣ ಸದೃಶ್ಯವೆನಿಸಿಕೊಳ್ಳುತ್ತದೆ. ಅಣ್ಣ ತಂಗಿಯ 'ಮಿಥೊಂದು' ಇಲ್ಲಿ ಕೆಲಸ ಮಾಡಿರುವಂತಿದೆ. ಸ್ಥಳೀಯ ಚರಿತ್ರಯೊಂದು ಹೊರಗಿನಿಂದ ಬಂದು ರಾಜ್ಯವಾಳುತ್ತಿದ್ದ ಆಳುವ ಅರಸನಿಗೆ ಮುಳುವಾಗುತ್ತದೆ. ವೀರರಾಜ. ಹೊರಗಿನಿಂದ ಬಂದು ನಿಂತವನು. ಇದು ಚರಿತ್ರೆಗೆ ಪುರಾಣಕ್ಕೂ ಸ್ಥಳೀಯರಿಗೂ ಹೊರಗಿನವರಿಗೂ ಕೊಂಡಿಹೆಣೆಯುವ ಜನಪದ ಕಥಾಮಾದರಿ. ಮಲೆನಾಡಿನಲ್ಲಿ ಈ ಕತೆ ಬಹುತೇಕ ಎಲ್ಲಾ ಗಾಯಕರಲ್ಲಿ ಹಾಗೂ ವೃತ್ತಿ ಗಾಯಕರಲ್ಲಿ ಪ್ರಚುರದಲ್ಲಿ ಉಂಟು.

ಹೀಗೆ ಸ್ವಾಮಿಗೌಡರು ಸಂಗ್ರಹಿಸಿದ ವೈವಿಧ್ಯಕತೆಗಳು ವಿವಿಧ ರೀತಿಯ ಸಾಂಸ್ಕೃತಿಕ, ಚಾರಿತ್ರಿಕ, ಸಾಮಾಜಿಕ ಅಂಶಗಳನ್ನು ಹೊರಸೂಸುತ್ತವೆ. ಇವೆಲ್ಲವನ್ನೂ ಗೌಡರು ಸಂಗ್ರಹಿಸಿ ಕನ್ನಡ ಜಾನಪದ ಲೋಕಕ್ಕೆ ಇರಿಸಿದ್ದಾರೆ. ಮುಂದಿನವರು ಇದನ್ನೆಲ್ಲಾ ವಿಭಜಿಸಿಕೊಂಡು ಅಭ್ಯಾಸಮಾಡಲು ಇಂಥಾ ಕಥನಗಳು ಉಪಯುಕ್ತವಾಗುತ್ತವೆ.

ಗೌರವ ಮತ್ತು ಸನ್ಮಾನಗಳು

ಸ್ವಾಮಿಗೌಡರು ೧೯೯೦ರಲ್ಲಿ ಹಾಸನದಲ್ಲಿ ನಡೆದ ೬೫ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ಹೊಯ್ಸಳ ಸಂಪದ' ಸ್ಮರಣ ಸಂಚಿಕೆ ಸಮಿತಿಯ ಸದಸ್ಯರಾಗಿದ್ದರು. ಆ ಸಂಚಿಕೆಗೆ ಡಿ.ಆರ್.ಚನ್ನೇಗೌಡರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಬರೆದುಕೊಟ್ಟಿದ್ದಾರೆ.

ಯಾವುದೇ ಕನ್ನಡ ಸಾಹಿತ್ಯ ಸಮ್ಮೇಳನವಾದರೂ ತಪ್ಪದೆ ಭಾಗವಹಿಸುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯರಾಗಿದ್ದರು ಸ್ವಾಮಿಗೌಡರು.

೧) ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದಿದ್ದರು.

೨) ಹಾಸನದ ಕನ್ನಡ ಸಂಘದಿಂದ ೧೯೭೮ರಲ್ಲಿ;

೩) ಹಾಸನ ಜಿಲ್ಲಾ ರಾಜ್ಯೋತ್ಸವ ಸಮಿತಿ ೧೯೯೧ರಲ್ಲಿ;

೪) ಆಲೂರು ತಾಲ್ಲೂಕು ರಾಜ್ಯೋತ್ಸವ ಸಮಿತಿ ೧೯೯೬ರಲ್ಲಿ;

೫) ಅರಕಲಗೂಡು ತಾಲ್ಲೂಕು ಸಮಿತಿ ೧೯೯೭ ರಲ್ಲಿ;

ಗೌರವ ಸನ್ಮಾನಕ್ಕೆ ಪಾತ್ರರಾದರು.

ಕೊಣಗೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ವೇದಿಕೆಗೆ 'ಪಂಡಿತ ಸ್ವಾಮಿಗೌಡ ವೇದಿಕೆ' ಎಂದು ಹೆಸರಿಡಲಾಗಿತ್ತು. ೨೦೦೩ರಲ್ಲಿ ಪಾಳ್ಯದಲ್ಲಿ ನಡೆದ ಆಲೂರು ತಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆಗೆ "ದಿ|| ಪಂಡಿತ ಸ್ವಾಮಿಗೌಡ ವೇದಿಕೆ" ಎಂದು ಕರೆಯಲಾಗಿತ್ತು.

ಸ್ವಾಮಿಗೌಡರು ಸಾಕಷ್ಟು ಸಾಹಿತ್ಯಿಕ ಯೋಜನೆಗಳನ್ನು ಹಾಕಿಕೊಂಡಿದ್ದರು. ವಿಧಿಯ ಆಟವೇ ಬೇರೆಯಾಗಿತ್ತು. ೧೬-೮-೧೯೯೮ರಂದು ತಮ್ಮ ಧರ್ಮಪತ್ನಿಯಿಂದ 'ಮಂಗಳಾರತಿ ಪದ' ಗಳನ್ನು ಹಾಡಿಸಿ ಅವರೇ ಬರೆದುಕೊಂಡು 'ಜನತಾ ಮಾಧ್ಯಮ' ದಿನಪತ್ರಿಕೆಯ ಸಂಪಾದಕರಿಗೆ ತಾವೇ ಪತ್ರ ಬರೆದು ಪ್ರಕಟಿಸಿ ಪ್ರೋತ್ಸಾಹಿಸುವಂತೆ ಪ್ರಾರ್ಥಿಸಿದ್ದಾರೆ. ಆದರೆ ಅಂಚೆಗೆ ಕಳಿಸಿಲ್ಲ. ಮಾರನೇ ದಿನ ೧೭-೮-೧೯೯೮ರಂದು ರಾತ್ರಿ ಪಾರ್ಶ್ವವಾಯುವಿಗೆ ತುತ್ತಾಗಿ ಸಂಪೂರ್ಣ ಪ್ರಜ್ಞಾಶೂನ್ಯರಾಗಿದ್ದಾರೆ. ಮಣಿಪಾಲ ಆಸ್ಪತ್ರೆಗೆ ದಾಖಲಿಸಿದರೂ ಯಾವ ಚಿಕಿತ್ಸೆಯೂ ಫಲಕಾರಿಯಾಗದೆ ೨೫-೯-೧೯೯೮ರಂದು ವಿಧಿವಶರಾಗಿದ್ದಾರೆ.

ವಿಪರ್ಯಾಸವೆಂದರೆ ಪ್ರಕಟಣೆಗೆ ಸಿದ್ಧಪಡಿಸಿದ ಯಾವುದೇ ಕೃತಿಗಳು ಮುದ್ರಣವಾಗದೆ ಹಾಗೆಯೇ ಉಳಿದಿವೆ.

ಅಪ್ರಕಟಿತ ಕೃತಿಗಳು ಹೀಗಿವೆ :

೧) ಈ ಎಮ್ಮೆ ನಂದೇ ಹೌದು (ಕಥಾ ಸಂಗ್ರಹ).

೨) ಭಕ್ತ ಪ್ರಹ್ಲಾದ (ಗದ್ಯಾನುವಾದ).

೩) ಆದರ್ಶ ವ್ಯಕ್ತಿಗಳು.

೪) ತೋಟದ ರಂಗಪ್ಪ (ಕಿರುಕಾದಂಬರಿ).

೫) ಮೈದುನ ರಾಮಯ್ಯನ ಸುವ್ವಿ.

೬) ಶಾಂತಿಗ್ರಾಮದ ಇತಿಹಾಸ.

೭) ಕೆಲವು ಶಾಸನಗಳು.

೮) ಮಂಗಳಾರತಿ ಪದಗಳು.

ಪಂಡಿತ ಸ್ವಾಮಿಗೌಡರ ಬದುಕು ಆದರ್ಶವಾದದ್ದು; ಅವರ ಬರಹ ಉಪಯುಕ್ತವಾದದ್ದು. ಅಂತೆಯೇ ಅವರ ಜನಪದ ಸಾಹಿತ್ಯ ಸಂಗ್ರಹ ಅಧ್ಯಯನಕ್ಕೆ ಅರ್ಹವಾದದ್ದು.

* * * * *

ಪಂಡಿತ ಸ್ವಾಮಿಗೌಡ

ಶಾಲಾ ಶಿಕ್ಷಕರಾಗಿದ್ದ ಪಂಡಿತ ಸ್ವಾಮಿಗೌಡರು ಎಲೆಮರೆಯ ಕಾಯಿಯಂತೆ ಸದ್ದಿಲ್ಲದೆ ಸಾಹಿತ್ಯಕೃಷಿ ಮಾಡಿದ್ದಾರೆ. ಜಾನಪದದ ಆಸಕ್ತಿಯಿಂದ ಕ್ಷೇತ್ರಕಾರ್ಯ ಮಾಡಿ ನಿಷ್ಠೆಯಿಂದ ಗಟ್ಟಿ ಸಾಹಿತ್ಯ ಕೃತಿಗಳನ್ನು ನೀಡಿದ್ದಾರೆ. ಹಾಸನ ಜಿಲ್ಲಾ ಪರಿಸರದ ಅವರ ಜನಪದ ಗ್ರಂಥಗಳು ಅಧ್ಯಯನಕ್ಕೆ ಉಪಯುಕ್ತವಾಗಿವೆ. ವಿರಳವಾದ ಚಾರಿತ್ರಿಕ ಜನಪದ ಕಥಾನಕವನ್ನು ಒಳಗೊಂಡ ಅವರ ಜನಪದ ಕಥನಗೀತೆಗಳು ಕುತೂಹಲಕಾರಿಯಾಗಿವೆ.

ಸ್ವಾಮಿಗೌಡರನ್ನು ಹತ್ತಿರದಿಂದ ಬಲ್ಲಂತಹ ಹೆಚ್.ಆರ್. ಮಂಜಪ್ಪಗೌಡರು ಈ ಪರಿಚಯ ಪುಸ್ತಕವನ್ನು ಬರೆದಿದ್ದಾರೆ.

–ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ನಂ.1, ಜಲದರ್ಶಿನಿ ಬಡಾವಣೆ,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054